(c) from whom the loss will be got made good ?

SMT. RENUKA RAJENDRAN (Minister of State for Sericulture and Youth Services).—

(a) There are 7 Government Silk Filatures in the State.

(b) Since the year 1975 the filatures have not, earned any profit. The statement showing the details of the losses sustained is laid on the Table. †

(c) Possibility of recovering losses will not arise.

ಶ್ರೀ ವಿ.ಬಿ. ಭಾವಿ.—ನಾನು ಥರ್ಮಲ್‌ಪ್ಲಾಂಟ್ ಬಗ್ಗೆ ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದೆ, ಪ್ರಶ್ನೆ ಕಳಿಸಿದ್ದೆ. ಯಾವುದಕ್ಕೂ ಉತ್ತರ ಬರಲಿಲ್ಲ. ಆದ್ದರಿಂದ ತಾವು ಇದರ ಬಗ್ಗೆ ಗಮನಕೊಡಬೇಕು.

ಅಧ್ಯಕ್ಷರು.—೨೨೫ ಜನ ಸದಸ್ಯರು ಇರತಕ್ಕ ಈ ಮನೆಯಲ್ಲಿ ನೂರಾರು ಪ್ರಶ್ನೆಗಳನ್ನು ಕೊಟ್ಟಿರುತ್ತಾರೆ. ನಿಧಾನವಾದರೆ, ತಾವು ನನಗೆ ಬಂದು ಹೇಳಿದರೆ ಪೋಸ್ಟ್‌ಮಾಡಿ ಎಂದು ಹೇಳುತ್ತೇನೆ.

SRI A. LAKSHMI SAGAR.—Sir, I gave my notice under Rule 312 to-day only at 11 O'clock. I am raising this matter With your kind and special permission.

ಅಧ್ಯಕ್ಷರು.—ಈ ವಿಷಯದ ಬಗ್ಗೆ ೩೧೨ರ ಕೆಳಗೆ ಮಾನ್ಯ ಶ್ರೀ ಬಿ ಬಸವಲಿಂಗಪ್ಪನವರು. ಶ್ರೀ ಆರ್ಮುಗಂರವರು, ಶ್ರೀ ಚೌಡಯ್ಯನವರು ಶ್ರೀ ಸುಬ್ಬಯ್ಯಶೆಟ್ಟಿಯವರು ಮತ್ತು ಇನ್ನಿತರ ಸದಸ್ಯರುಗಳು ಕೊಟ್ಟಿದ್ದಾರೆ ಇನ್ನು ರೂಲ್ ೫೦ರ ಕೆಳಗೆ ಕೆಲವರು ನೋಟೀಸ್ ಕೊಟ್ಟಿದ್ದಾರೆ. ಮತ್ತೆ ಶ್ರೀ ಚಂದ್ರಶೇಖರ್‌ರವರು ಕಾಲಿಂಗ್ ಅಟೆನ್‌ಷನ್ ನೋಟೀಸ್ ರೊಟ್ಟಿದ್ದಾರೆ.. ...

SRI A. LAKSHMI SAGAR.—I would like to make a small submission, sir, I think those hon friends who have given notice under Rule 50, I request them to treat this matter as a matter under Rule 312 with a request that they may be permitted to have their say in the matter excluding the points covered by the previous speakers. This will facilitate an easy discussion and early disposal of this matter.

ಅಧ್ಯಕ್ಷರು.—ಬೇರೆ ಬೇರೆ ರೂಪದಲ್ಲಿ ಕೊಟ್ಟಿದ್ದರು ಸಹ ವಿಷಯವೇನೋ ಬಹಳ ಗಮನವಾಗಿದೆ.

Matter Under Rule 312

re.—Lathi charge by police on the Members of Dalita Sanga and Press Reporters at Bangalore

SRI B. BASAVALINGAPPA.—Sir, we gave this notice under Rule 50, only with a view to attract immediate attention of the Government. It is a very very important and urgent matter. Of course. the suggestion of Sri Lakshmi sagar is alright but the point is, the way in which the things are going an here in the State has got to be now attended by the opposition as well as the Members of the Treasury Benches. Therefore, I request that is may be treated under Rule 50 only so that it will have priority over other things.

---

† Copy placed in the Karnataka Legislature Library Vide No. 20 dated 13th June 1980.

SRI A. LAXMI SAGAR.—Sir, the pupose behind all these matters is the same. Now, the only question is of time factor and also the priority, gravity and seriousness with which this matter should be taken up. This is the matter which should be looked into, not only by the members of this side but also by the members of the Tr asury Benches. This is the matter. If you give priority, as you have now chosen to give, I believe, Sri Basavalingappa would agree with me to dispose it off under Rule 312.

ಶ್ರೀ ಬಿ. ವಿ. ಕಕ್ಕಿಲಾಯ.—ನಾವು ನಿಯಮಾವಳಿಗಳ ಪ್ರಕಾರ ರೂಲ್ ೫೦ರ ಪ್ರಕಾರ ಕೊಟ್ಟಿದ್ದೇವೆ ಈ ವಿಷಯದ ಗಂಭೀರತೆ ಜಾಸ್ತಿ ಇರುವುದರಿಂದ, ಯಾವಾಗ ನೋಟೀಸ್ ಕೊಟ್ಟಿದ್ದೇವೆ ಆಗ ತಾವು ಇದನ್ನು ತೆಗೆದುಕೊಳ್ಳಲೇ ಬೇಕಾಗುತ್ತದೆ. ಇದನ್ನಲ್ಲದೇ ಬೇರೆ ಬಿಜಿನೆಸ್ ತೆಗೆದುಕೊಳ್ಳುವ ಹಾಗೆ ಇಲ್ಲ. ಆದುದರಿಂದ ರೂಲ್ ೫೦ ರಂತೆ ಡೀಲ್ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

SRI T. CHOWDAIAH.—Notice under Rule 50 takes priority ove other notices,

SRI B. SUBBAIAH SETTY.—With due respect to the opinion expreessed by the Hon. member Sri Lakshmisagar, we feel that this matter should be discussed under Rule 50 because the gravity of the matter is very important and serious. I have no doubt that the hon. Members sitting on the Treasury Benches would also have the same feeling and I know that they would also agree with us to takh this matter under Rule 50. The gravity of the situation is so muce that this matter should be condemned in this august House by one and all, in one voice. Therefore, Sir, the matter may please be taken up under Rule 50 and I hope the concern of the hon. Member Sri Lakshmisagar is also the same. Considering the gravity of the matter we feel that it should be discussed under Rule 50 and the entire House should agree to carry out an adjournment motion on this issue.

MR. SPEAKER.—Let us not go to the technicalities of the Rules. The matter may be raised and the hon, Members who have sent notices under different rules can also participate and speak about the matters they want to.

SRI P. RAMDEV.—I have no objection, Sir.

MR. SPEAKER.—Now, let the hon.Members speak and then, I will hear the Chief minister also. Sri A Lakshmisagar please raise the matter.

SRI A. LAKSHMI SAGAR.—I am greatful to you, Sir. I place before your goodself, the instances that took place yesterday. Those instances are a part of the injustices heaped an a member of the weaker section of society in Hunsikote village at Malur taluka, who was subsequently, brutaly murdered on 30th March, 1980. Sir I am saying this because yesterday's incident has a bearing upon the

earlier incident, The matter relating to Sri Sheshgiriyappa and his family is well-known and it does not require repetition because the Press itself has taken upon itself the duty of exposing the injustices heaped on the family of Sheshgiriyappa, and therefore, I believe and trust, the Government would have taken note of the details of the incidence. But, prior to March, 1980 over a period of month series of petitions were submitted by Sri Sheshgiriyappa to the Revenue Authorities and the Police officers. The police authorities have taken it to the Inspector General of police and the Revenue authorities took it to the Deputy Commissioner. The last petition was made by Sri Sheshgiriyappa to the Deputy Commissioner was on 30th of March, 1980, the day on which he was murdered.

2-00 P. M.

There was no politics ; it was all the question of powerful and influential sections of the society in the village, taking cudgels against a person belonging to the weaker section of the society. There was no personal dispute or land dispute that followed The most sordid aspect of the entire thing is, nobody looked into this matter and came to the rescue of Sri. Sheshagiriyayappa. The influential sections had all the say, had all the influence which Successfully prevented the Police in taking action to protect the interists of Sri. Sheshagiryappa and he was brutally murdered. Then Sir, it did not end there. Smt. Anasuyamma, 19 years old widow of Sheshagiri- was raped in day -light by 10 persons after making her naked. This was teken up by Karnataka Dalithe sangarsha Samithi. They took upon themselves, carried on a state-wide agitation ;they held demonstrations in front of the office of the Revenue authorities inculding the Deputy Commissioner and the Police Officers. Children, women demonstrated in Kolar on 10-12-1979. They submitted petition to the authorities but no action was taken. According to my information, Smt. Anasuyamma, a 19 years old widow was raped while she had a small baby in her arm. Sir, the Dalitha Sangarsha Samithi took out demonstrations in front of the office of the Duputy Superintendent of Police, Kolar, Dharna and Satyagraha were staged on 5-12-1979. What happened? They were all arrested, charge-sheeted and cases are pending against them. It is in pursuance of this same protestation and for the purpose of exposing the injustice and the lethargy of the Police department, that they came all the way on foot two Bangalore, having treked a distance of 50 miles. They came to Bangalore yesterday after having journeyed for two to three days. Throughout their journey, they staged in several villages with the help and hospitality of the villagers and they staged dramas,

sang beautiful lyrics,and portrayed the gory tales and the brutal in-action, callousness on the part of the Police Department, for the purpose of enlightening the public. If the Dalitha Sangarsha Samithi has doue anything, it has done one thing,it has tried to expose the lethargy and in-justice for which the authorities particularly the Police were known and tried to educate the people. What have you done, Sir ? What have done for them ? When they ask for justice, you gave them lathis, lathis were their replies. When they asked for justice and prompt action, Police action aginst the culprits, you gave them lathis and brutally lathi-charged the Dalitht Sangarsha Samithi members Is it what we expect from a decena Government, a Civil Government, a Government which swears day in and day out in their un-diluted verbal adoration of their adherence for the help of the down-trodden and the weaker section of the society. Every press-note, every press-briefing, every statement of the Minister and other spokesmen of the Government are replete with their adoration of the weaker section. Here is a classic incident of a brutal murder of Sri Sheshagiriyappa, When people went to demonstrate and expose the in-justice of the people and educate the people;— I do not say that they have not erred because most of them were young people and they were angry, the Police have beat them. The Dalitha Sangarsha Samithi members held a meeting in the Cubbon park for four hours and everything was peaceful and nothing un-toward incident reported. But when they wanted to meet the Hon'ble Speaker and the Chief Minister and submit a memorandum to them, the entire burden of their songs, the entire burden of their pleas and the entire burden of their effort was only to expose the hollowness of their claims and the statements of the Government that they are for weaker sections of the people. What have you done for them ? This is the answer which I want from you. This is the crux of the problem, that is inherent in the entire sordid affair. You have failed to protect the weaker sections of the people which ultimately ended in the brutal murder of Shri.sheshagiriyappa Even today, the Police did not take propt action against the culprits. It took several weeks and months to get at the culprites. I am not saying anything about the pending cases, I am placing only before you, the manner in which the Police have acted. Was their Police in Kolar district, is the question that the Government should answer. The Dalitha Sangarsha Samithi people -I have got great regard for them, they took up the cudgels against the injnstice and the lethargy of the Police. They must be complimented and rewarded. But what have you done, Sir ? You have lathi-charged them, you have arrested them. Is this what we expect from a benign Government ? This is one aspect of the matter.

The second aspect of the matter is that the Police wing as the Government, is being used against the press and to beat them to stifle the right as freedom of expression. I should like to bring to your kind notice that this is not for the first time, that the press has been so badly treated and reporters assaulted. It happened several months ago in Chickamagalur. The Press-Reporters showed cards of accreditation ' They told to the Police , look here, we are press-Reporters, please spare us'. Even then the Police mercilessly beat them. Several of the Press-Reporters had to be lodged in Hospitals in Bangalore, for several months as they had to take treatment. A similar thing has happened yesterday. Mr. Hindudhar, I have not seen him, was covering this procession, this JAHA. The Police knew about it. And when it was shown to the Police, the Card of his accredihation,the Police disregarded it and he was mercilesed beaten. Where are we heading to ? Is not the Press in this country still free? Is there no Constitution, to protect their interest? If you don't like them, do not like them. But how can any Police or any Government official prevent a Press-Reporter from covering a particular incident? In order to silence him physically, the Police have, perhaps under instructions, lathi-charged and assaulted brutally the Press-Reportes. May I bring to your kind notice, sometime ago, the Chief Minister, had in an angry mood, informed the Press-Reports that they were not giving vide publicity to his statements in front pages of the News-papers ? In that context, he appers to have said. it is reported in the press—ಜನ ನೋಡಿಕೊಳ್ಳುತ್ತಾರೆ ನಿಮ್ಮನ್ನ. I believe thi- incident has something to do with t hat particular incident. There fore, Sir, there is no protection for weaker sections of tha society in this State. I am referring only to the affairs with which I am concerned. There appears to be no protection whatsoever. I am bringlng to the notice of this House and to you Sir, that on Manday another inciden took plaec.I will not speak how the entire administrative machinery including the Police is used systematically and in the process destroying all norms of fair-play, legality, justice everything. Is this what they are trying to do ? One incident is is sufficient to expose the hollowness of the Ruling Party. If they have any sympathy towards the human beings, let them shed their tears today. They should have done it long ago. Let them exterminate all the bad things which they have done So far. Let them come and say that with all the powers of the Police Department and the Revenue Department, they would spare no efforts in bringing to book all the culprits who are engaged in doing injustice against the weaker sections of the prople.

In this matter, as Sri B. Basavalingappa said in the beginning, there appeas to be no protection for the weaker sections of the society in our State. There is a series of such incidents. Sir, I seek your protection, I seek the Government's protection. Yesterday, I was reading a reported statement of Sri R. Gundu Rao to his partymen. I fancied to look here a new Chief Minister, young and energetic, who would start his administration and run it efficiently and keep it clean. I welcome this. But certain incidents were brought to the notice of the Government in this very House: And the attitude of the Chief Minister to these incidents, belied the reported statement to his partymen. I do not believe in the words. I believe in the deeds more than the words of a man. I also believe and hope teat Sri R. Gundu Rao will rise to the occasion and live up to the standards he himself has set for. Here is a test for him. Therefore, the least that I expect is that the injustice that is caused to the family of Sri Sheshagiriyappa must be immediately undone. The persons responsible for the rape must pe punished according to law. The land that has been grabbed from him must be restored to him. All the cases against the Dalit Sangharsha Samithi people should bo withdrawn, And in yesterday's incident, all the arrested perons must be freed and no case should be filed against them. The Government must express unconditional apology for having assaulted the Press Reporter. This is the least, I expecet in order to establish the cridibility in the claims that the Government has been working for the weaker sections of the people and the down trodden, suppressed oppressed and depressed.

Thank you very much, Sir.

MR. SPEAKER.—Let the hon.Members be brief in their submissions and also see that there is no repetition

SRI M. VEERAPPA MOILY.—The Speaker was pleased to ask the hon.Members to be brief. I would like to suggest not to mix up the issue the with other issues we have before us. The issue before we is not of the murder case or the rape case. The issue before us is yesterday's incident and Lathi Charge and the attack on a journalist. This is the main issue.

MR. SPEAKER.—Hon.Members may speak only on yesterday's incident.

SRI B. V. KAKKILAYA.—There is a background to it and we have to refer to it. We have to take into consideration as to why they came here and why they were driven to this position.

MR. SPEAKER.—But references cannot be made in respect of the cases that are before the Court.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥಮಂತ್ರಿಗಳು ಈಗ ಕೇಳಿದ ಬುದ್ಧಿಮಾದವನ್ನು ಗಮನದಲ್ಲಿಟ್ಟುಕೊಂಡು ನಾವು ಮಾತನಾಡುತ್ತೇವೆ. ನಿನ್ನೆ ದಿನ ಆದ ಘಟನೆ ಅದಕ್ಕೆ ಕಾರಣ ಏನಾದರೂ ಇರಬೇಕಲ್ಲವೇ ? ಇಲ್ಲದೇ ಹೋದರ ದಲಿತ ಸಂಘರ್ಷ ಸಮಿತಿಯವರು ಪಾದಯಾತ್ರೆ ಮಾಡಿಕೊಂಡು ಏತಕ್ಕೆ ಕೋಲಾರದಿಂದ ಬರುತ್ತಿದ್ದರು ? ಮಾನ್ಯ ಲಕ್ಷ್ಮೀಸಾಗರ್ ಅವರು ಮಾತನಾಡುತ್ತಾ ಹೇಳಿದಹಾಗೆ ಅಲ್ಲಿ ಖೂನಿಯಾಯಿತು, ಅತ್ಯಾಚಾರ ಆಯಿತು, ಏನಾದರೂ ಅವರಿಗೆ ರಕ್ಷಣೆ ಸಿಗಲಿಲ್ಲ, ಜನಗಳಲ್ಲಿ ನಿರಾಶೆಯಾಯಿತು, ರಕ್ಷಣೆ ಸಿಗುವುದಿಲ್ಲ ಎಂಬುದು ವ್ಯಕ್ತವಾದಾಗ ಅವರು ಏನು ಮಾಡಬೇಕು ? ಅಲ್ಲಿಂದ ಇಲ್ಲಿಯವರೆಗೆ ೫೦೦ ಜನ ನಡೆದುಕೊಂಡು ಬಂದಿದ್ದಾರೆ. ಮುಖ್ಯಮಂತ್ರಿಗಳನ್ನು ನೋಡಿ ಮನವಿ ಮಾಡಿ ಕೊಳ್ಳಲು ಅವರು ಅಲ್ಲಿಂದ ಬಂದಿದ್ದಾರೆ. ಖೂನಿ ಕೇಸಾಗಲೀ, ಅತ್ಯಾಚಾರದ ಕೇಸಾಗಲೀ ಅದರ ಪರ ಅಥವಾ ವಿರೋಧವಾಗಿ ಅವರು ಬರಲಿಲ್ಲ. ರಕ್ಷಣೆ ಸಿಗಲಿಲ್ಲ ಎಂದು ಬಂದರು. ನಮ್ಮ ಉದ್ದೇಶಗಳನ್ನು ಸಾಧನೆ ಮಾಡಿಕೊಳ್ಳುವಾಗ ಅಹಿಂಸೆಯನ್ನು ಪಾಲಿಸಬೇಕು ಎಂಬ ಮಾತನ್ನು ಮಹಾತ್ಮ ಗಾಂಧಿಯವರು ಹೇಳಿದ್ದರು. ಅಹಿಂಸೆಯ ಮೂಲಕ ಸತ್ಯಾಗ್ರಹ ಮಾಡಿ ನಮ್ಮ ಸಿಟ್ಟನ್ನು ತೋರಿಸಿಕೊಳ್ಳಬೇಕು ಎಂದು ಹೇಳಿಕೊಟ್ಟು ಅ ಪ್ರಕಾರವೇ ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟಿದ್ದಾರೆ. ಅದೇ ಅಸ್ತ್ರವನ್ನೇ ಎಲ್ಲಾ ಕಡೆ ಉಪಯೋಗಿಸುತ್ತಿದ್ದಾರೆ. ಅಸ್ಸಾಂನಲ್ಲಿ ಅದೇ ಅಸ್ತ್ರವನ್ನು ಉಪಯೋಗಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಾದ ಗುಂಡೂರಾಯರು ನಿನ್ನೆ ಮಾತನಾಡುತ್ತಾ ಸಮಾಜದಲ್ಲಿ ವಿವಿಧ ರೀತಿಯ ವಿವಿಧಜನಾಂಗದ ಜನರು ವಿವಿಧ ರೀತಿಯಲ್ಲಿ ವ್ಯತ್ಯಾಸದ ಜೀವನ ನಡೆಸುತ್ತಿದ್ದಾರೆ ಎಂದರು. ಅದು ಸರಿ. ಅದರ ಬದಲಾವಣೆ ಮಾಡುವುದಕ್ಕೆ ಸಮಾಜದಲ್ಲಿ ಏನಾದರೂ ಪ್ರಯತ್ನ ಮಾಡಬೇಕು. ನಾನಾದರೂ ಪ್ರಯತ್ನ ಮಾಡಬೇಕು. ನೀವಾದರೂ ಪ್ರಯತ್ನ ಮಾಡಬೇಕು, ಈ ಸಭೆಯಾದರೂ ಪ್ರಯತ್ನ ಮಾಡಬೇಕು. ೧೦ ವರ್ಷದ ಹಿಂದೆ ನಾನೊಂದು ಮಾತು ಹೇಳಿದ್ದೆ. ಅದು ಎಲ್ಲರಲ್ಲೂ ಗೊಂದಲಕ್ಕೆ ಈಡುಮಾಡಿತು, I said "Let there be holiday for non-violence" ಈ ಬಗ್ಗೆ ಅಲ್ಲಿ ಇಲ್ಲಿ ಸ್ವಲ್ಪ ಗುಜುಗುಜು ಮಾತುಗಳು ಕೇಳಿಬಂದವು ಈಗ ಏನಾಗಿದೆ ಎಂದರೆ ದಲಿತ ಜನ ಇವತ್ತು ಅಹಿಂಸ ಮಾರ್ಗವನ್ನೇ ಹಿಡಿದಿದ್ದಾರೆ. ಯಾರು ಯಾರು ಶೋಷಣೆಗೊಳಗಾಗಿದ್ದಾರೆ ಅವರಿಗೆ ಏನಾದರೂ ಅನ್ಯಾಯವಾದಾಗ ಅವರ ಹಕ್ಕಿಗೆ ಅತಿಕ್ರಮ ಪ್ರವೇಶ ಮಾಡಿ ಅವರ ಜೀವನಕ್ಕೆ, ಆಸ್ತಿಗೆ ರಕ್ಷಣೆ ಇಲ್ಲದ ಸಮಯದಲ್ಲಿ ಅವರು ಯಾವರೀತಿ ವರ್ತನೆ ಮಾಡಬೇಕು ಎಂಬುದನ್ನು ದಯಮಾಡಿ ನೀವೆ ಹೇಳಿಕೊಡಿ. ನಿರಾಶೆಗೊಂಡ ಜನ, ರಕ್ಷಣೆ ಸಿಗದ ಜನ ಕೋಲಾರದಿಂದ ಇಲ್ಲಿಯವರೆಗೆ ನಡೆದುಕೊಂಡು ಬಂದಿದ್ದಾರೆ. ಅಹಿಂಸಾತ್ಮಕ ರೀತಿಯಲ್ಲಿ ಸಭೆಯನ್ನು ನಡೆಸಿದ್ದಾರೆ. ಆದರೆ ಪೋಲೀಸರಿಗೆ ಏನು ಬಂತೋ ಗೊತ್ತಿಲ್ಲ ಚೆನ್ನಾಗಿ ಹೊಡೆದಿದ್ದಾರೆ. ಈ ದೇಶದಲ್ಲಿ ಪೋಲೀಸರ ಮೇಲೆ ಯಾರಿಗೂ ಹಿಡಿತವಿಲ್ಲ. ನಾನು ಈ ಬಗ್ಗೆ ಆಯವ್ಯಯದ ಮೇಲೆ ಮಾತನಾಡುವಾಗ ಹೇಳುತ್ತೇನೆ. ಮಾನ್ಯ ಗುಂಡೂರಾಯರು ಪೋಲಿಸ್ ಇಲಾಖೆಯ ಮಂತ್ರಿಯಾಗಿದ್ದಾರೆ. ಅವರು ಈ ಬಗ್ಗೆ ಗಮನ ಕೊಡಬೇಕು. ೫–೬ ತಿಂಗಳಿಂದ ಪೋಲೀಸರ ಮೇಲಿನ ಹಿಡಿತ ಸಡಿಲವಾಗಿದೆ. ಅವರು ಏನು ಬೇಕಾದರೂ ಮಾಡಬಹುದು, ಹೇಗಾದರೂ ನಡೆದುಕೊಳ್ಳಬಹುದು, ಯಾವರೀತಿ ಬೇಕಾದರೂ ವರ್ತನೆ ಮಾಡಿ ಎಂದು ಏನಾದರೂ ಹೇಳಿಕೊಟ್ಟಿದ್ದಾರೋ ಏನೋ ಎಂಬ ಅನುಮಾನ ಉಂಟಾಗುತ್ತದೆ. ಹೇಳಿಕೊಡದೇ ಹೋದರೆ ಈ ರೀತಿ ವರ್ತನೆ ಮಾಡುತ್ತಿರುವ ಜನರನ್ನು ಹೇಗೆ ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಪ್ರಯತ್ನಪಡುತ್ತೀರಿ ಎಂಬುದನ್ನು ಯೋಚನೆ ಮಾಡಿದ್ದೀರಾ ? ಅವರಿಗೆ ಶಿಕ್ಷೆ ಮಾಡುವುದಿಲ್ಲ. ಎಷ್ಟು ಜನ ಪೋಲೀಸ್ ಅಧಿಕಾರಿಗಳ ಮೇಲೆ ದೂರುಗಳು ಬಂದಿವೆ ? ಒಂದು ಬಂಡಲ್ ಇದೆ, ಅದನ್ನು ನಿಮಗೆ ಕಳಿಸುತ್ತೇನೆ. ಕ್ರಮ ತೆಗೆದುಕೊಳ್ಳಿ. ರೋಣದಲ್ಲಿ ದಲಿತವರ್ಗದ ವ್ಯಕ್ತಿ ತನ್ನ ಹೆಂಡತಿ ಜೊತೆ ಮನೆಯಲ್ಲಿರುವಾಗ ಯಾರೋ ಒಬ್ಬ ಮನುಷ್ಯ ಬಂದು ಹೆಂಡತಿ ಮೇಲೆ ಅತ್ಯಾಚಾರ ಮಾಡುವುದಕ್ಕೆ ಪ್ರಯತ್ನ ಮಾಡಿದಾಗ ಪ್ರತಿಭಟನೆ ಮಾಡಿದ್ದಕ್ಕೆ ಅವನ ತಲೆ ಮೇಲೆ ಕಲ್ಲು ಹಾಕಿ ಸಾಯಿಸಿದ್ದಾರೆ. ಪೋಲೀಸರು ಅವನ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ದಯಮಾಡಿ ತೆಗೆಸಿ ನೋಡಿ ಪೋಲೀಸರು ಸಿಕ್ಕಿದವರನ್ನು ಹಿಡಿದು ಹೊಡೆದಿದ್ದಾರೆ, ಹೆಣ್ಣುಮಕ್ಕಳನ್ನು ಎಳೆದು ಕೊಂಡು ಹೊಡೆದಿದ್ದಾರೆ, ಬೂಟಿನಲ್ಲಿ ತುಳಿದಿದ್ದಾರೆ, ಇದರ ಜೊತೆಗೆ ಪತ್ರಿಕಾಕರ್ತನಿಗೂ ಹೊಡೆದಿದ್ದಾರೆ, ಪೋಲೀಸರ

ಹತೋಟಿಯಿಲ್ಲದ ಈ ರೀತಿಯ ವರ್ತನೆಗಳು ಹೀಗೆ ಮುಂದುವರಿಯಕೂಡದು. ದೇಶದಲ್ಲಿ ಈ ರೀತಿ ರಾಜ್ಯಭಾರ ಮಾಡಿ ಎಂದು ಬಡ ಜನತೆಗೆ ನಿಮಗೆ ಮತ ಕೊಟ್ಟರೇನು ? ಸಂತೋಷದ ಮತ್ತು ಪ್ರಿಯ ವಾದ ಸಂಗತಿ ಏನೆಂದರೆ ಲೋಕಸಭೆಯ ಚುನಾವಣೆಯಾದ ಮೇಲೆ ಅಧಿಕಾರಕ್ಕೆ ಬಂದವರು ಇಂಡಿಯಾ ದೇಶದಲ್ಲಿ ಅದರಲ್ಲೂ ನಮ್ಮ ರಾಜ್ಯದಲ್ಲಿ ಬಡಜನತೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ, ಅವರಿಗೆ ಏನೇನು ಕತ್ತರಿ ಪ್ರಯೋಗ ಮಾಡಬೇಕು, ಏನೇನು ಹಿಂಸೆ ಕೊಡಬೇಕು ಮತ್ತು ಯಾವ ರೀತಿ ಶಾಂತಿಭಂಗ ಮಾಡಿ ಈ ಎಲ್ಲವನ್ನೂಕೂಡ ಚೆನ್ನಾಗಿ ಮಾಡುತ್ತಿದ್ದಾರೆ. ಇದು ಸರ್ಕಾರಕ್ಕೆ ಸಲ್ಲದ ಕಾರ್ಯ. ಹೀಗೆ ಆಡತಳಿ ನಡೆಸಿಕೊಂಡು ಹೋಗಬೇಕೆಂಬ ಇಚ್ಛೆ ನಿಮಗಿದ್ದರೆ ನೀವು ಬಹಳ ದಿವಸ ಅಧಿಕಾರದಲ್ಲಿರುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದಕ್ಕಿಂತ ಇನ್ನೇನು ಹೇಳಬೇಕು ? ಸರಿಯಾದ ಹತೋಟಿಯನ್ನು ನೀವೇ ತೆಗೆದುಕೊಳ್ಳದೆ ಹೋದರೆ ನಾವು ಏನಾದರೂ ಮಾಡಬೇಕಾಗುತ್ತದೆ. ಅಹಿಂಸಾತ್ಮಕವಾಗಿ ಬಂದ ಜನ ಗಳಿಗೆ ಹೀಗೆ ಮಾಡಿದರೆ, ಆ ಜನಗಳು, ಹಿಂಸೆಯನ್ನು ಪ್ರೇರೇಪಿಸುವ ಸರ್ಕಾರಕ್ಕೆ ಮನ್ನಣೆ ಇಲ್ಲ. ಹೊಡೆ ಯುವುದು ಮತ್ತು ಬಡಿಯುವುದು ಮಾಡುತ್ತಾರೆಂದು ಎಲ್ಲರೂ ಸೇರಿದರೆ ಪೋಲೀಸರು ಅವರನ್ನು ಕಾಯುವುದಕ್ಕಾಗುತ್ತದೆಯೇ ? ಎಲ್ಲರೂ ಸಂಘಟಿತರಾದರೆ ಪೋಲಿಸರು ಕಾಯುವುದಕ್ಕೆ ಬರುತ್ತಾರೆಯೆ? ಆದುದರಿಂದ, ಸರ್ಕಾರ ಇದರ ಕಡೆಗೆ ದಯವಿಟ್ಟು ಗಮನಕೊಡಬೇಕು. ಈ ಕೃತ್ಯದಲ್ಲಿ ಭಾಗಿಗಳಾಗಿ ರುವ ಪೋಲೀಸರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು. ಅಲ್ಲದೆ, ಈ ಘಟನೆಯಲ್ಲಿ ನಷ್ಟಕ್ಕೊಳ ಗಾಗಿರುವವರಿಗೆ ಸರ್ಕಾರದವರು ಎಕ್ಸ್‌ಗ್ರೇಷಿಯೋ ಪೇಮೆಂಟ್ ಕೊಟ್ಟು ಅವರ ಸಂಸಾರಗಳಿಗೆ ನೆರವಾಗ ಬೇಕು. ಇಲ್ಲದಿದ್ದರೆ, ನಾವು, ವಿರೋಧ ಪಕ್ಷದವರು ಮುಂದೆ ಏನು ಮಾಡಬೇಕೆಂದು ವಿಚಾರ ಮಾಡು ತ್ತೇವೆ. ನಾನು ಎಂದಿಗೂ ಜೈಲಿಗೆ ಹೋಗಿಲ್ಲ.

ಶ್ರೀ ವೈ. ರಾಮಕೃಷ್ಣ.—ಈಗ ಆಸೆ ಬಂದಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಆಸೆ ಬಂದಿದೆ. ನಾನು ಜೈಲು ಖಾತೆ ಸಚಿವನಾಗಿದ್ದಾಗ ಜೈಲು ಗಳನ್ನು ಸುಧಾರಣೆ ಮಾಡಿದ್ದೇನೆ. ಯಾವ ಪಕ್ಷ ಅಧಿಕಾರಕ್ಕೆ ಬರುತ್ತದೆಂದು ತಿಳಿಯುವುದಕ್ಕಾಗುವುದಿಲ್ಲ. ಅಂತೆಯೇ, ಜೈಲಿನಲ್ಲಿ ಊಟದ ವ್ಯವಸ್ಥೆ ಮತ್ತು ಮಲಗುವ ವ್ಯವಸ್ಥೆ ಎಲ್ಲವನ್ನೂ ಸರಿ ಮಾಡಿಟ್ಟಿದ್ದೇನೆ.

ಶ್ರೀ ಮಳ್ಳೂರು ಆನಂದರಾವ್.—ಜೈಲಿಗೆ ಹೋಗಿ ನಮಗೆ ಅನುಭವವಿದೆ. ನಿಮಗಿಲ್ಲ. ಜೈಲಿನ ವ್ಯವಸ್ಥೆ ಅಚ್ಚುಕಟ್ಟಾಗಿದೆ. ನೀವು ಹೋಗಿಬಿಟ್ಟು ಬನ್ನಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಬಸವಲಿಂಗಪ್ಪನವರು ಹೇಳಿದಂತೆ ಜೈಲುಗಳಲ್ಲಿ ಯಾವ ಸುಧಾರಣೆಯೂ ಕಂಡುಬರುವುದಿಲ್ಲವೆಂದು ಘಂಟಾಘೋಷವಾಡಿ ಹೇಳುತ್ತೇನೆ. ಮಾನ್ಯ ದೇವೇಗೌಡರು ಒಂದು ಸಲ ಜೈಲಿನಲ್ಲಿದ್ದರು. ಆದರೆ, ನಾನು ಸ್ವಾತಂತ್ರ್ಯ ಬಂದಮೇಲೆ ಮತ್ತು ತುರ್ತುಪರಿಸ್ಥಿತಿ ಕಾಲದಲ್ಲಿ ಹಲವಾರು ಸಲ ಜೈಲಿಗೆ ಹೋಗಿದ್ದೇನೆ. ಜೈಲುಗಳಲ್ಲಿ ಯಾವ ಸುಧಾರಣೆಯೂ ಆಗಿಲ್ಲ.

ಶ್ರೀ ಬಸವಲಿಂಗಪ್ಪ.—ಮಾನ್ಯ ಲಕ್ಷ್ಮೀಸಾಗರ್ ಅವರು ನನ್ನ ಸ್ನೇಹಿತರು. ಅವರು ಯಾವಾಗ ಜೈಲಿಗೆ ಹೋಗಿದ್ದರೆನ್ನುವುದು ನನಗೆ ಗೊತ್ತಿಲ್ಲ. ನಾವಿದ್ದಾಗ ವ್ಯವಸ್ಥೆ ಚೆನ್ನಾಗಿತ್ತು. ಈಗ ಕೆಟ್ಟು ಹೋಗಿರಬೇಕೆಂದು ಕಾಣಿಸುತ್ತದೆ. ಸಂಧಾರಿಸೋಣ. ಮಾನ್ಯ ಗುಂಡೂರಾಯರು ಜೈಲುಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ.

ಶ್ರೀ ಆರ್. ಗುಂಡೂರಾವ್.—ಆ ಖಾತೆ ಮಾನ್ಯ ವೆಂಕಟಪ್ಪನವರ ಹತ್ತಿರ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಏನು ಮಾಡತ್ತಾರೋ ನೋಡೋಣ. ಅಂತೂ, ಜೈಲಿಗೆ ಹೋಗಬೇಕೆಂದು ನನಗೆ ಆಸೆಯಾಗಿದೆ. ಸಾರ್ವಜನಿಕರ ಸಿಟ್ಟಿಗೆ ಅವಕಾಶ ಕೊಡಬೇಡಿ. ಪತ್ರಿಕಾ ಕರ್ತರು ಸುದ್ದಿ ಸಂಗ್ರಹ ಮಾಡುವುದಕ್ಕೆ ಹೋಗಿರುತ್ತಾರೆ. ಅವರನ್ನು ಹಿಡಿದುಕೊಂಡು ಪೋಲೀಸರು ಹೊಡೆದರೆ ಮತ್ತಿನ್ನೆಲ್ಲಿ ಇತಿಮಿತಿ ? ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳದೂ ಒಂದು ವೇದಿಕೆ, ನಮ್ಮದೂ ಒಂದು ವೇದಿಕೆ. ಪತ್ರಿಕೆಗಳವರು ಬಯ್ದು ಏನಾದರೂ ಬರೆಯುತ್ತಾರೆಂದು ತೊಂದರೆ ಕೊಡುವುದು ನೀತಿಬಾಹಿರ. ಆದುದರಿಂದ, ಈ ಘಟನೆಯಲ್ಲಿ ಯಾರು ಯಾರು ದುರ್ವರ್ತನೆ ಮಾಡಿದ್ದಾರೆ ಅವರ ಮೇಲೆ ಅತಿ ಶೀಘ್ರ ವಾಗಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ.—(ವಿಠಲ) ಮಾನ್ಯ ಅಧ್ಯಕ್ಷರೇ, ಈ ಘಟನೆಗೆ ಸಂಬಂಧಿಸಿದಂತೆ ಅನೇಕ ವಿಚಾರಗಳನ್ನು ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ಈ ಘಟನೆ ಅಕಸ್ಮಾತಾಗಿ ನಡೆದಿಲ್ಲ. ಅವರೇನು ವಿಧಾನ ಸೌಧದ ಮೇಲೆ ಧಾಳಿ ಮಾಡಬೇಕು ಮತ್ತು ಮಾನ್ಯ ಮುಖ್ಯ ಮಂತ್ರಿಯವರ ವಿರುದ್ಧ ಪ್ರದರ್ಶನ ಮಾಡಬೇಕೆಂದು ಬಂದಿರಲಿಲ್ಲ. ಬಹಳ ದೀರ್ಘಕಾಲದ ಹಿನ್ನೆಲೆ ಇದಕ್ಕೆ ಇದೆ. ಅದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಕೊಲೆಯಾದ ಶೇಷಗಿರಿಯಪ್ಪನು ಮಡಿಕೆಗಳನ್ನು ಮಾಡಿ ಕೊಂಡು ಒಂದು ಮನೆಯಲ್ಲಿ ಕಳೆದ ಐವತ್ತು ವರ್ಷಗಳಿಂದಲೂ ವಾಸ ಮಾಡುತ್ತಿದ್ದನು. ಆ ಮನೆಯಲ್ಲಿ ಕುಂಬಾರ ಕೆಲಸ ಮಾಡಲಿಕ್ಕೆ ಲೈಸೆನ್ಸ್ ಇಲ್ಲವೆಂದು ಹೇಳಿ ಅದನ್ನು ಬಿಟ್ಟು ಹೊರಹೋಗಬೇಕೆಂದು ಬಿ.ಡಿ.ಓ. ಅವರು ನೋಟಿಸ್ ಕೊಟ್ಟು ಆತನನ್ನು ಮನೆಯಿಂದ ಹೊರಕ್ಕೆ ಹಾಕುವುದಕ್ಕೆ ಪ್ರಯತ್ನ ಪಟ್ಟರು. ಆತನ ಸ್ವಾಧೀನದಲ್ಲಿ ಹಲವಾರು ವರ್ಷ ಗಳಿಂದ ಒಂದು ಭೂಮಿ ಇತ್ತು. ಅದರಲ್ಲಿ ಅವನು ಬಿತ್ತಿ, ಬೆಳೆ ಕೊಯ್ಯುವ ಸಮಯದಲ್ಲಿ ಆ ಜಮೀನನ್ನು ಬಿಟ್ಟು ಹೋಗಬೇಕೆಂದು ತಹಶೀಲ್ದಾರರಿಂದ ನೋಟೀಸ್ ಬಂತು. ಅಂತಹ ಸಂದರ್ಭದಲ್ಲಿ ಆತನು ಆಗಿನ ಸರ್ಕಾರದಿಂದ ರಕ್ಷಣೆ ಕೇಳಿದ್ದಾನೆ. ಇದರಲ್ಲಿ ರಾಜಕೀಯ ಬೆರೆಸುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ಹಿಂದೆ ಇದ್ದ ಸರ್ಕಾರದ ಗಮನಕ್ಕೂ ಕೂಡ ಈ ವಿಚಾರಗಳನ್ನು ಶೇಷಗಿರಿಯಪ್ಪ ಮತ್ತು ಅವನ ಕುಟುಂಬದವರು ತಂದಿದ್ದಾರೆ. ಬಿ.ಡಿ.ಓ. ತಹಶೀಲ್ದಾರ್ ಜಿಲ್ಲಾಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳಿಗೆ ಈ ವಿಷಯವನ್ನು ಮನವಿ ಮಾಡಿಕೊಂಡರೂ ಅಲ್ಲಿನ ಕೆಲವು ಪಟ್ಟಭದ್ರ ಹಿತಾಶಕ್ತಿಗಳ ಪ್ರಭಾವಕ್ಕೊಳಗಾಗಿ ಅವರು ಯಾವ ಕ್ರಮವನ್ನೂ ತೆಗೆದು ಕೊಂಡಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ, ಪ್ರಜಾಪ್ರಭುತ್ವದಲ್ಲಿ ತೀವ್ರ ಕ್ರಮ ತೆಗೆದುಕೊಳ್ಳುವ ಹಾಗಿಲ್ಲ ಅಥವಾ ಬಿಡುವ ಹಾಗಿಲ್ಲ ಎಂಬು ಹೇಳಿದರು. ಅಂದರೆ, ತಾವು ಅಧಿಕಾರದಲ್ಲಿ ರುವ ಕಾಲದಲ್ಲಿ ಪೂರ್ತಿಯಾಗಿ ಅಧಿಕಾರಿಗಳು ಮಾಡಿದ್ದನ್ನು ಅಥವಾ ಅವರು ಕೊಟ್ಟ ವರದಿಗಳನ್ನು ನೋಡಿಕೊಂಡು ಸಾರ್ವಜನಿಕರಿಂದ ಬರುವ ಮನವಿಗಳ ಕಡೆ ಗಮನ ಕೊಡದಿದ್ದರೆ ಇಂತಹ ಅನಾಹುತಗಳು ಬಹಳಷ್ಟು ನಡೆಯುವುದಕ್ಕೆ ಅವಕಾಶವಿದೆ. ಸ್ಥಳೀಯ ಪೋಲೀಸ್ ಅಧಿಕಾರಿಗಳು ಅಲ್ಲಿನ ಹಿತಾಸಕ್ತರ ಒತ್ತಡಕ್ಕೆ ಬಲಿಬಿದ್ದು ಅಸಹಾಯಕರ ಮೇಲೆ ಧಾಳಿ ಮಾಡುವುದಕ್ಕೆ ಇದು ಪ್ರೇರಣೆಯಾಗುತ್ತದೆ. ತಾವು ಜನರಿಂದ ಚುನಾಯಿತರಾಗಿ ಜನರ ಪರವಾಗಿ ಅಧಿಕಾರ ನಡೆಸುತ್ತಿದ್ದೀರಿ. ದೂರನ್ನು ತಮ್ಮಲ್ಲಿ ಹೇಳಿ ಕೊಳ್ಳದೆ ಮತ್ತೆ ಯಾರಲ್ಲಿ ಅವರು ಹೇಳಿಕೊಳ್ಳಬೇಕು ? ತಮ್ಮಲ್ಲಿ ಹೇಳಿಕೊಳ್ಳುವುದಕ್ಕೆ ಅವಕಾಶವಿಲ್ಲ ವೆಂದರೆ ಅಥವಾ ಕೊಟ್ಟ ಮನವಿಯನ್ನು ಗಮನಿಸುವುದಿಲ್ಲವೆಂದರೆ ಈ ರಾಜ್ಯದಲ್ಲಿ ಜನರಿಗೆ ರಕ್ಷಣೆ ಸಿಕ್ಕು ವುದು ಸಾಧ್ಯವಿಲ್ಲವೆಂದಾಯಿತು.

೨–೩೦ ಪಿ. ಎಂ.

ನಿಮ್ಮ ಅಧಿಕಾರಿಗಳ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಕೊಲೆ ನಡೆಯುವುದಕ್ಕೆ ಮೊದಲು ಕೊಲೆಯಾದಂತ ವ್ಯಕ್ತಿ, ನನ್ನ ಕೊಲೆಯಾಗುವ ಸಂಭವ ಇದೆ, ನನಗೆ ಭಯ ಆಗುತ್ತಿದೆ, ನನಗೆ ರಕ್ಷಣೆ ಕೊಡಬೇಕೆಂದು ಸಂಬಂಧಪಟ್ಟ ಎಸ್.ಪಿ ಯವರ ಹತ್ತಿರ, ಉನ್ನತ ಪೋಲೀಸ್ ಅಧಿಕಾರಿಗಳ ಹತ್ತಿರ, ಜಿಲ್ಲಾಧಿಕಾರಿಗಳ ಹತ್ತಿರ ಹಾಗೂ ಸರ್ಕಾರಕ್ಕೆ ಕೇಳಿಕೊಂಡರೂ ಕೂಡ ರಕ್ಷಣೆ ಕೊಡಲಿಲ್ಲ, ಕೂನೆಗೆ ಕೊಲೆ ಯಾಯಿತು. ಇಷ್ಟೆಲ್ಲಾ ಮೊರೆಯಿಟ್ಟರೂ ಅವನ ರಕ್ಷಣೆಯಾಗಲಿಲ್ಲವೆಂದರೆ ಇನ್ನು ಯಾರಿಗೆ ಮೊರೆಯಿಡ ಬೇಕು ? ಯಾರಲ್ಲಿ ಹೇಳಬೇಕು ? ಆ ಬಡಪಾಯಿಗಳು ಚಳುವಳಿ ಮಾಡಲಿಕ್ಕೆ ಆದರಲ್ಲಿಯೂ ಶಾಂತ ಯುತವಾಗಿ ೫೦–೬೦ ಮೈಲಿಗಳಿಂದ ಕಳೆದ ಮೂರು ದಿವಸಗಳಿಂದ ಬೆಂಗಳೂರಿಗೆ ನಡೆದುಕೊಂಡು ಬಂದು ಇಲ್ಲಿ ತಮ್ಮನ್ನು ಮುಖ್ಯಮಂತ್ರಿಗಳನ್ನು ನೋಡಲಿಕ್ಕೆ ಬಂದರೆ ಅವರ ಮೇಲೆ ಪೋಲೀಸ್ ಅಧಿಕಾರಿಗಳು ದಬ್ಬಾಳಿಕೆ ಮಾಡಿದ್ದಾರೆ, ಒಬ್ಬ ಹೆಣ್ಣುಮಗಳ ಮೇಲೆ ಮಾನಭಂಗ ಮಾಡುವುದಕ್ಕೆ ಪ್ರಯತ್ನ ಮಾಡಿ ದಾ ನಿನ್ನೆ ಭಟನೆ ಬಗ್ಗೆ ಹೇಳಬೇಕಾದರೆ. ಸಾಯಂಕಾಲ ೬ ಗಂಟೆಗೆ ಸಾರ್ವಜನಿಕ ಸಭೆಯನ್ನು ಇಟ್ಟು ಕೊಂಡಿದ್ದರು. ಒಂದು ಗಂಟೆಗೆ ಮಾನ್ಯ ಅಧ್ಯಕ್ಷರನ್ನು ನೋಡಿ ಮನವಿ ಅರ್ಪಿಸಬೇಕು, ಮುಖ್ಯ ಮಂತ್ರಿ ಗಳನ್ನು ನೋಡಿ ಮನವಿ ಅರ್ಪಿಸಬೇಕೆಂದು ತೀರ್ಮಾನ ಮಾಡಿದ್ದರು. ಸಾಯಂಕಾಲದ ಸಭೆಗೆ ನನ್ನನ್ನೂ ಕೂಡ ಬರುವಂತೆ ಹೇಳಿದ್ದರು. ಅದಕ್ಕೆ ನಾನು ಒಪ್ಪಿಕೊಂಡಿದ್ದೆ. ಮಳೆ ಬರುತ್ತಿದ್ದರಿಂದ ೬ ಗಂಟೆಗೆ ೫ ನಿಮಿಷ ಇರುವಾಗ ನಾನು ಹೋಗಿ ಬೆಂಬಲ ಸೂಚಿಸಬೇಕೆಂದು ಹೋದರೆ, ಅಷ್ಟರಲ್ಲಿ ಲಾಠಿ ಚಾರ್ಜ ಆಗಿಹೋಗಿತ್ತು. ಕೆಲವರನ್ನು ವ್ಯಾನಿನಲ್ಲಿ ತುಂಬಲಾಗಿತ್ತು. ನಾನು ಅಲ್ಲಿಗೆ ತಲುಪಬೇಕಾದರೆ ಇದೆಲ್ಲಾ ಆಗಿಹೋಗಿತ್ತು ದಲಿತ ಸಮಿತಿಯ ಪ್ರತಿನಿಧಿಗಳಿಗೆ ಸಾಯಂಕಾಲ ೬ ಗಂಟೆಯಾದರೂ ತಮ್ಮನ್ನು

ಮತ್ತು ಮುಖ್ಯ ಮಂತ್ರಿಗಳನ್ನು ನೋಡುವುದಕ್ಕೆ ಅವಕಾಶ ಸಿಗಲಿಲ್ಲ, ನಿಮ್ಮ ಅಧಿಕಾರಿಗಳು ಏನಾದರು ನಿಮಗೆ ಈ ರೀತಿ ಬಂದಿದ್ದಾರೆ ಎಂದು ತಿಳಿಸಿದ್ದರೆ ? ತಾವು ಅವಕ್ಕೆ ಏನಾದರೂ ಸಮಾಧಾನದ ಉತ್ತರ ಕೊಟ್ಟಿದ್ದರೆ ಬಹುಶಃ ಇಂಥ ದುರ್ಘಟನೆ ಆಗುತ್ತಿರಲಿಲ್ಲ. ನಿನ್ನೆ ನಡೆದಂಥ ಘಟನೆಯನ್ನು ತಾವು ಲಘುವಾಗಿ ಪರಿಗಣಿಸಬಾರದೆಂದು ಪ್ರಾರ್ಥಿಸಿ ಕೊಳ್ಳುತ್ತೇನೆ. ಇಂಥ ಗಂಭೀರ ಸನ್ನಿವೇಶದಲ್ಲಿ ಸೌಜನ್ಯತೆಯಿಂದ ಬರಮಾಡಿಕೊಂಡು ನಾಲ್ಕು ಮಾತುಗಳನ್ನು ಹೇಳಿ ಅವರಿಗೆ ಸಮಾಧಾನ ಮಾಡಬೇಕಾದುದ್ದು ತಮ್ಮ ಕರ್ತವ್ಯವಲ್ಲವೆ ? ಅವರು ತಮ್ಮ ಗೋಳನ್ನು ಯಾರಲ್ಲಿ ಹೇಳಬೇಕು ? ನಾನು ಕೂಡ ಕಣ್ಣಾರೆ ನೋಡಲಿಕ್ಕೆ ಆಗಲಿಲ್ಲ, ಇವತ್ತು ಮುಂಜಾನೆ ಪತ್ರಿಕೆಯನ್ನು ನೋಡಿದರೆ ಮನಸ್ಸಿಗೆ ತುಂಬಾ ನೋವಾಗುತ್ತಿದೆ. ನಮ್ಮ ರಾಜಧಾನಿಯಲ್ಲಿ ಹೈಕೋರ್ಟಿನ ಮುಂದೆ, ವಿಧಾನ ಸೌಧದ ಮುಂದೆ ಮಹಿಳೆಯರ ಮೇಲೆ,ಸುಮಾರು ೫೦ ಮೈಲಿ ದೂರ ನಡೆದುಕೊಂಡು ಬಂದಂತ ದಲಿತರ ಮೇಲೆ ಪೋಲೀಸಿನವರು ಇಂಥ ಹೇಯಕೃತ್ಯವನ್ನು ಮಾಡಿರುವುದು ಸರಿಯೇ ? ಗಂಡ, ಅಪ್ಪ ಇವರ ಕೊಲೆ ಬಗ್ಗೆ ನ್ಯಾಯ ಕೇಳಿದ್ದು ತಪ್ಪೆ ? ಅಪರಾಧಿಗಳು ಇಂದು ಸ್ವತಂತ್ರರಾಗಿ ತಿರುಗಾಡುತ್ತಿದ್ದಾರೆ, ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ಮತ್ತೆ ಅವರು ಪ್ರಚೋದನೆ ಮಾಡುತ್ತಿದ್ದಾರೆ., ದಾಳಿ ಮಾಡುತ್ತಿದ್ದಾರೆ. ಇವತ್ತು ಅಮಾನುಷವಾಗಿ ಹೊಡೆದಿರತಕ್ಕ ಪೋಲೀಸಿನವರ ಮೇಲೆ ಪೋಲೀಸ್ ಅಧಿಕಾರಿಗಳ ಮೇಲೆ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಆಕೆಯ ಬಟ್ಟೆಯನ್ನು ಹರಿದುಹಾಕಿದ್ದಾರೆ, ಹೆಣ್ಣುಮಗಳ ರಕ್ತ ಹೈಕೋರ್ಟಿನ ಮುಂದೆ ಬಿದ್ದಿದೆ, ರಾಜಧಾನಿಯಲ್ಲಿ ಹೆಣ್ಣುಮಗಳ ರಕ್ತ ತರ್ಪಣ ಆಗಬೇಕೇನೂ, ರಾಜ್ಯದಲ್ಲಿ ಶಾಂತಿ ನೆಮ್ಮದಿಯಿಂದ ಜನಸಾಮಾನ್ಯರು ಬಾಳಬೇಡವೆ ? ಸರ್ಕಾರ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದೇ ಇದ್ದರೆ ಮಾನ್ಯ ಬಸವಲಿಂಗಪ್ಪನವರು ಏನು ಹೇಳಿದ್ದಾರೆ ಅದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ, ಜೈಲಿನಲ್ಲಿ ಅದರೆ ಸುಖ ಮತ್ತು ರಕ್ಷಣೆ ಇದೆ. ಜೈಲಿನಲ್ಲಿ ಮಾನಭಂಗ ಮಾಡುವುದಕ್ಕೆ ಆಗುವುದಿಲ್ಲ, ಪೋಲೀಸ್ ಲಾಕಪ್‌ನಲ್ಲಿ ಅತ್ಯಾಚಾರ ಮಾಡುತ್ತಾರೆ. ಇದು ಬಹಳ ದಿವಸಗಳಿಂದ ರಾಜ್ಯದಲ್ಲಿ ನಡೆಯುತ್ತಿದೆ. ಒಂದು ಉದಾಹರಣೆ ತಮ್ಮ ಮುಂದೆ ಬಂದಿದೆ, ಇದರಿಂದ ರಾಜಕೀಯ ಲಾಭ ಪಡೆಯಬೇಕೆಂತಇಲ್ಲ. ವಿಧಾನ ಸೌಧದ ಸುತ್ತಮುತ್ತ ೧೪೪ನೇ ಸೆಕ್ಷನ್ ಜಾರಿಯಲ್ಲಿದೆ, ಅದನ್ನು ಅವರು ಮುರಿದು ಬಂದಿಲ್ಲ ? ಕಲ್ಲು ಹೊಡೆದಿಲ್ಲ ? ಬೆಂಕಿ ಹಚ್ಚಿಲ್ಲ ತಮ್ಮನ್ನು ಹಾಗೂ ಮುಖ್ಯಮಂತ್ರಿಗಳನ್ನು ನೋಡಿ ಮನವಿ ಕೊಡಲಿಕ್ಕೆ ಬಂದವರಿಗೆ ಸಿಕ್ಕಿದಂಥ ಪ್ರತಿಫಲ ನಿಮ್ಮ ಪೋಲೀಸ್ ಅಧಿಕಾರಿಗಳು ತಮ್ಮ ಕಣ್ಣುಮುಂದೆ, ಶಾಸನ ಸಭೆ ನಡೆಯುವಾಗ, ೨೨೪ ಜನ ಶಾಸನ ಸಭಾ ಸದಸ್ಯರ ಮುಂದೆ ಇಂಥ ಅತ್ಯಾಚಾರ ಮಾಡಿರುವಾಗ ಇನ್ನು ಹಳ್ಳಿಗಾಡಿನ ಜನತೆಗೆ ನಿಮ್ಮ ಅಧಿಕಾರಿಗಳಿಂದ ರಕ್ಷಣೆ ಸಿಗುತ್ತದೆಯೇ ? ಎಂದು ಕೇಳಬೇಕಾಗಿದೆ. ಬಸವಲಿಂಗಪ್ಪನವರು ಹೇಳಿದಂತ ಕ್ರಮಕ್ಕೆ ಹೋಗುವುದಕ್ಕೆ ಅವಕಾಶಕೊಡಬೇಡಿ, ಬಹುಮತ ಇದೆ ನಾವು ನಡೆಸಿಕೊಂಡು ಹೋಗುತ್ತೇವೆಂದು ತಾವು ಭಾವಿಸಿರಬಹುದು. ಬಹುಮತ ಇದ್ದ ಮಾತ್ರಕ್ಕೆ ಈ ದೇಶದಲ್ಲಿ ಶಾಂತಿ ನೆಮ್ಮದಿಯಿಂದ ತಮ್ಮ ಅಧಿಕಾರವನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲರ ಸಹಕಾರ ಬೇಕೇ ಬೇಕು. ಆದ್ದರಿಂದ ನಿನ್ನೆ ನಡೆದಂತ ಘಟನೆಯಲ್ಲಿ ನೊಂದಿರತಕ್ಕ ದಲಿತರಿಗೆ ರಕ್ಷಣೆ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ಗಾಯಾಳುಗಳಿಗೆ ಚಿಕಿತ್ಸೆ ಕೊಡುವುದಲ್ಲದೆ, ಪರಿಹಾರವನ್ನು ಕೊಡುವುದಕ್ಕೆ ವ್ಯವಸ್ಥೆಮಾಡಿ, ಇದರ ಬಗ್ಗೆ ವಿಚಾರಣೆ ಮಾಡಿ, ತಪ್ಪಿತಸ್ಥ ಪೋಲೀಸ್ ಅಧಿಕಾರಿಗಳ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೀರೆಂದು ನಂಬಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI C. M. ARUMUGHAM (K.G.F.).—Mr. Speaker. Sir, the Daliths came to Bangalore yestarday. Sir, they came to meet the Chief Minister with regard to the law and order situation in Malur Taluk. The procession started at 9 a.m. on the 9th June, 1980 from Hunasikotte. They halted at Malur, Hoskote and Krishnarajapuram, and finally they reached Bangalore on 12th June, 1980. They reached Bangalore by walk from Hunsikotte. It was a long march by these Daliths They did not have food at all for three days. They did not change their clothes for three days. For three days, they did not have bath. They

walked the distance and reached Bangalore. In Bangalore, they wanted to see the Hon. Speaker of the Assembly and the Hon. Chief Minister of the Karnataka State. Hear, the Police asked them to wait till evening. We know very well that yesterday the Chief Minister was busy with the Assembly and Council work. So, there were waiting for the Chief Minister ; But, in the meanwile, they were staging how S shagiriyappa was murdered and they were singing songs etc , of course, for gaining the sympathy of the general public. Sri Seshagiriyappa was murdered Even two years before his murder he had made a complaint to the Police that there was danger to his life Whether the police gave protection to him or not is for the Government to know the details. Nonetheless, he was murdered. Apart from this, his brother Sri Venkatesaiah's leg was chopped off; Sri Seshagiriyappa's mother and Venkatesaiah's son were assaulted and they are still under treatment at the SNR Hospital, Kolar Sri Krishnegowda, who is the main culprit in this murder case, is the president Taluk Board of Malur and he got anticipatory bail from the High Court. What is more his relatives are threatening the witnesses and the relatives of Seshagiriyappa. They are being harased by the Police. That is why the Dalit came to Bangalore to present a Memorandum to the Hon'ble Chief Minister. Some how or other, the police officers were not able to give protection to them. May be they have given protection, but not their satisfaction Therefore, they came here to meet the Hon'ble Chief Minister. There was nothing wrong in their coming here.

Sir, there is a limit even for madness. The police yesterday did not act tactfully. The poor Dalits walked all the distance for three days without sleep and without proper food The police instead of resorting to lathi charge could have brought half a dozen processionist here and made arrangements to meet the Speaker as the Chief Minister was busy. The police have miserably failed to do this. Do the police think that they are meant only to beat the people ? No. They are ment for giving protection to the poor people and to do justice. Yestarday Seshagiriyappa's wife was punched by the boot-legs and his son was severely beaten. one English Lecturer of Mandya College was beaten; one worker from Bhadravathi who is a Dalit was beaten and one Sri Giriyappa was also beaten, and ten more persons were injured. Two hundred persons were arrested. Sir, these people walked the long distance without food, shelter and sleep. They were arrested and kept in the Police Station till 9 O'clock. There was no compassion or sympathy for them in the Police Station to give them even a cup coffee or tea. Fifteen persons were produce before the Metropolitan Magistrate. Apart from this, the Prajavani Chief

Reporter Sri Mindudhar when he approached the Police to know the details about the processionists, he was beaten by the Assistant Commissioner of Police Sri Rajput. This Assistant Commissoner of Police is responsible for ordering lathi-charge on these innocent poor Dalits. Sir, even for arresting people there is a Knack. The Police have not taken action against the culprits in the murder case.

The dalits have got certain demands. They want that action should be taken against the family members and relatives of Sri Krishne Gowda and prevent them from interfering with the day-to-day proceedings of the case and threatening the witnesses. I request the Hon'ble Chief Minister to do justice in this case. I would like to add one more point for kind consideration of the Hon'ble Chief Minister. I suggest that some compensation be given to the family members of Sri Seshagiriyappa and action should be taken against the Police who are responsible for this incident, particularly the Assistant Commissioner of Police, the Inspector of Police and the Reserve Police Constables who were on duty at the time of the incident. Was there any necessity for such a lathi charge and brutal attack on the poor Dalits, I want to kngw ?

As referred by my hon. friend Sri A. Lakshmisagar this is the second or the third time that a press Correspondent has been assaulted. This was done in the day light. I want to know whether the police are licensed to beat anybody they like and whether it was warranted for the police to take such an action. I think 'no'. The processionists were disciplined and they were only anxious to see the Hon'ble Chief Minister and Hon'ble Speaker. But instead of taking them or some of their representatives to see the Chief Minister and the Speaker, the police attacked them with lathis. Sir, one of the sufferers said that even when they were pushed into the van they were booted. Just because they are Dalits do the police think that they could do anything they like. Is this the way the police should act and cause injuries to the poor Dalits? Are the police meant only for this ? I appeal to the Hon'ble Chief Minister to take stern action against the police officers responsible for this incident, and also to give protection for Seshagiriyappa's family and relatives and also to give adequate compensation to the family members of Sri Seshagiriyappa. The Hon'ble Chief Minister was the leader of the Youths before and developed his leadership as a Youth Leader. I also suggest that persons who sufferedinjuries in the incident should be admitted to the hospital and given proper treatment.

I am sorry for the mis-behaviour of the police on the Prajavani Press Correspondent.

† ಶ್ರೀ ಸುಬ್ಬಯ್ಯ ಶೆಟ್ಟಿ (ಮಂಗಳೂರು).— ಮಾನ್ಯ ಅಧ್ಯಕ್ಷರೇ, ಈ ಒಂದು ನಿಲುವಳಿ ಸೂಚನೆಯನ್ನು ನಾವು ಬಹಳ ಗಂಭೀರತೆಯಿಂದ ಇವತ್ತು ತಮ್ಮ ಮುಂದು ಕಳುಹಿಸಿಕೊಟ್ಟಿದ್ದೇವೆ. ಈ ಒಂದು ಘಟನೆಯ ಬಗ್ಗೆ ಬಹಳಷ್ಟು ವಿಚಾರಗಳನ್ನು ಈಗಾಗಲೇ ಮಾತನಾಡಿದಂತಹ ಸದಸ್ಯರುಗಳು ಹೇಳಿದ್ದಾರೆ. ನನ್ನ ಮನಸ್ಸಿಗೆ ಏನು ಕಾಣುತ್ತದೆ ಎಂದರೆ, ಶೇಷಗಿರಿಯಪ್ಪನವರ ಕೊಲೆಯಾಗಿದೆ, ಅಥವಾ ಮಹಿಳೆಯ ಒಂದು ಮಾನಭಂಗವಾಗಿದೆ ಅಥವಾ ನಿನ್ನೆ ನಡೆದಂತಹ ಒಂದು ಧಾರುಣ ಸಂಗತಿಯು ಒಂದು ಪೆಟ್ಟು ಎಂಬುದಾಗಿ ನಾನು ಹೇಳಬಯಸುತ್ತೇನೆ. ಕೆಲವು ತಿಂಗಳುಗಳಿಂದ ನಡೆಯುತ್ತಿರುವ ಅತ್ಯಾಚಾರಗಳು ಆದರಲ್ಲೂ ಕೂಡ ಅಸಾಯಕರು ಯಾರಿದ್ದಾರೆ, ಅಸಾಯಕರು ಅಂದರೆ ನಮ್ಮ ರಾಜ್ಯದಲ್ಲೇ ಅಷ್ಟೇ ಇತರೇ ರಾಜ್ಯಗಳಲ್ಲೂ ನಡೆದಂತಹದ್ದನ್ನು ಪತ್ರಿಕೆಯಲ್ಲಿ ಓದಿದ್ದೇವೆ, ಪತ್ರಿಕೆಯಲ್ಲಿ ಬಾರದೇ ಇರುವಂತಹವು ಬೇಕಾದಷ್ಟು ಇವೆ ಇದು ಏನನ್ನು ಸೂಚಿಸುತ್ತದೆ ಎಂದರೆ ಈ ಒಂದು ಕೆಲವು ತಿಂಗಳುಗಳಿಂದ ಸ್ವಲ್ಪ ಹಣವಂತರು ಯಾರಿದ್ದಾರೆ. ಭೂಮಾಲೀಕರು ಯಾರಿದ್ದಾರೆ ಇವರಿಗೆ ಹೆಚ್ಚು ಶಕ್ತಿ ಬಂದಂತೆ ಕಾಣುತ್ತದೆ ಒಂದು ನಮೂನೆಯ ಧೈರ್ಯ ಬಂದಹಾಗೆ ಕಾಣುತ್ತದೆ. ಇದರ ಜೊತೆಗೆ ಈ ಕೆಲವು ತಿಂಗಳುಗಳಿಂದ ಈ ದುರ್ಬಲ ವರ್ಗದವರಿಗೆ ಏನೋ ಗ್ರಹಚಾರ ಬಂದಹಾಗೆ ಕಾಣುತ್ತದೆ. ಕೆಲವು ಘಟನೆಗಳು ಏನು ನಡೆದಿದೆ ಇದು ಸಮಾಜದಲ್ಲಿ ಈ ಬಲಿಷ್ಟ ವರ್ಗ ಏನಿದೆ, ಆ ಒಂದು ಬಲಿಷ್ಟ ವರ್ಗಕ್ಕೆ ಹೆಚ್ಚಿನ ಧೈರ್ಯ ಬಂದಿದೆ ಎಂಬುದನ್ನು ಮಾತ್ರ ಇದು ಸೂಚಿಸುತ್ತದೆ ನಿನ್ನೆ ನಡೆದಂತಹ ಘಟನೆ ಏನು ಸೂಚಿಸುತ್ತದೆ ಎಂದರೆ ಏನೋ ಲಾಠಿ ಚಾರ್ಜ್ ಮಾಡಿದ್ದಾರೆ, ಕೆಲವರಿಗೆ ಗಾಯ ಆಗಿ ಆಸ್ಪತ್ರೆಯಲ್ಲಿ ಟ್ರೀಟ್‌ಮೆಂಟ್ ತೆಗೆದುಕೊಂಡಿದ್ದಾರೆ ಎಂಬದಷ್ಟನ್ನೇ ಸೂಚಿಸದೆ ರಾಜಧಾನಿಯಲ್ಲೂ ಕೂಡ ಯಾರು ಈ ದಲಿತರು ಒಂದು ಸರ್ಕಾರಕ್ಕೆ ಮನವಿಯನ್ನು ಕೊಡಲಿಕ್ಕೆ ಬಂದಾಗ ಸರ್ಕಾರದ ಮಂತ್ರಿಗಳು ಇವರಿಂದ ಮನವಿಯನ್ನು ಸ್ವೀಕರಿಸುವುದಕ್ಕೆ ಸಿಗಲಿಲ್ಲ. ಅದು ಮಾತ್ರವಲ್ಲದೆ ಇವರ ಮೇಲೆ ವಿನಾಕಾರಣ ಹಲ್ಲೆ ನಡೆಯುತ್ತಿದೆ ಎಂದರೆ ಇಲ್ಲಿ ಪುನಃ ಈ ರಾಜ್ಯದಲ್ಲಿ ಇನ್ನೂ ಕೂಡ ಈ ಒಂದು ಬಲಿಷ್ಟ ವರ್ಗಕ್ಕೆ ಹೆಚ್ಚಿನ ಧೈರ್ಯ ಬರಲಿಕ್ಕೆ ಇದೂ ಒಂದು ಕಾರಣವಾಗುತ್ತದೆ ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ. ಇಡೀ ನಮ್ಮ ರಾಜ್ಯದ ಬಲಿಷ್ಟ ವರ್ಗ ಏನಿದೆ ಅವರಿಗೆ ಮಾನಸಿಕವಾಗಿ ಧೈರ್ಯ ಬರುತ್ತದೆ. ಏನು ಧೈರ್ಯ ಬರುತ್ತದೆಂದರೆ ಈ ದಲಿತರನ್ನು ಹೇಗೂ ಹೊಡೆದಾಗಲೂ ಕೇಳುವವರಿಲ್ಲ, ಅವರ ಮೇಲೆ ಅತ್ಯಾಚಾರ ಮಾಡಿದರೂ ಕೇಳುವವರಿಲ್ಲ, ಏನು ಬೇಕಾದರೂ ಮಾಡಬಹುದು ಎಂಬುದಾಗಿ ನಿನ್ನೆ ನಡೆದಂತಹ ಒಂದು ಘಟನೆ ಇವಕ್ಕೆಲ್ಲಾ ಸೂಚನೆಯನ್ನು ಕೊಡುತ್ತದೆ ಎಂಬುದಾಗಿ ನಾನು ಕಳಕಳಿಯಿಂದ ತಮ್ಮ ಮೂಲಕ ಸರ್ಕಾರಕ್ಕೆ ತಿಳಿಯಬಯಸುತ್ತೇನೆ. ನಿನ್ನೆ ನಡೆದಂತಹ ಘಟನೆಯಲ್ಲಿ ಕೆಲವರು ಪೆಟ್ಟು ತಿಂದು ಆಸ್ಪತ್ರೆಯಲ್ಲಿದ್ದಾರೆ. ಕೆಲವರು ಜೈಲಿನಲ್ಲಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ತಾವೇ ಸ್ವತಃ ಅಲ್ಲಿಗೆ ಹೋಗಿ ಮುಖತಃ ಅವರೊಡನೆ ಮಾತನಾಡಿ, ಇಡೀ ನಮ್ಮ ಸಮಾಜದಲ್ಲಿ ಅವರನ್ನು ಕಡೆಗಣಿಸಿಲ್ಲ, ರಕ್ಷಣೆ ಕೊಡುತ್ತೇವೆ ಎಂಬುದನ್ನು ತೋರಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇನ್ನೂ ಅವರಿಗೆ ಸ್ವಲ್ಪ ಪರಿಹಾರ ಕೊಟ್ಟಿಲ್ಲ. ಅವರಿಗೆ ಬರೀ ಪರಿಹಾರ ಕೊಟ್ಟರೆ ಸಾಕು ಎಂಬುದಾಗಿ ನಾನು ಹೇಳುವುದಿಲ್ಲ. ಶೇಷಗಿರಿಯಪ್ಪನಂತಹ ಹುತಾತ್ಮರು ಅವರು ಸ್ಥಳದಲ್ಲಿ ಆಗುವಂತಹ ಅನ್ಯಾಯ ಏನಿದೆ ಅದನ್ನು ತಮ್ಮ ಸಾವಿನ ಮೂಲಕ ಸರ್ಕಾರಕ್ಕೆ ತೋರಿಸಿಕೊಟ್ಟಿದ್ದಾರೆ. ಅದರ ಬಗ್ಗೆ ದಲಿತರು ಇಲ್ಲಿಗೆ ಸುಮಾರು ೫೦ ಮೈಲಿಗಳಿಂದ ಬಂದಿದ್ದಾರೆ. ಸುಮಾರು ೩೦೦ ಜನ ಯುವಕರು ಈ ವಿಚಾರದಲ್ಲಿ ಆಗಿರತಕ್ಕಂತಹ ಅನ್ಯಾಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಂದಿದ್ದಾರೆ. ಅವರನ್ನೂ ಕೂಡ ನಾನು ಅಭಿನಂದಿಸುತ್ತೇನೆ. ಈ ಒಂದು ವಿಚಾರದಲ್ಲಿ ನಮ್ಮ ಸಮಾಜದ ಜನತೆಯ ತಿಳುವಳಿಕೆಯನ್ನು ಹೆಚ್ಚಿಸಿದ್ದಾರೆ. ಅದು ಮಾತ್ರವಲ್ಲದೆ ಯಾರು ಈ ದಲಿತರು ಇದ್ದಾರೆ ಅವರ ಒಂದು ಮಾರಲ್ ಎಂತೂಸಿಯಾಸಂ ಏನಿದೆ ಅದನ್ನು ಹೆಚ್ಚಿಸಿಕೊಂಡಿದ್ದಾರೆ. ಹೆಚ್ಚಿನ ಕೆಲಸವನ್ನೂ ಮಾಡಿದ್ದಾರೆಂದು ನಾನು ತಿಳಿಯಬಯಸುತ್ತೇನೆ.

ಇನ್ನೂ ಈ ನಿಲುವಳಿ ಸೂಚನೆಯ ಬಗ್ಗೇ ಹೇಳುವುದಾದರೆ, ಇಂತಹ ಒಂದು ಗಂಬೀರ ಘಟನೆ ಬಹುಶಃ ನಾವು ನೋಡಿಲ್ಲ. ಆದ್ದರಿಂದ ಈ ನಿಲುವಳಿ ಸೂಚನೆಯನ್ನು ಮಂಡಿಸಿದ್ದೇವೆ. ಈ ನಿಲುವಳಿ ಸೂಚನೆಯನ್ನು ತಾವು ಅಡ್ಮಿಟ್ ಮಾಡಬೇಕು. ಮತ್ತು ಇದರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಕಳಕಳಿಯಿಂದ ವಿನಂತಿ ಮಾಡಿಕೊಂಡು ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಎಲ್ಲರೂ ಇದರ ಬಗ್ಗೆ ಮಾತನಾಡಬೇಕು ಎಂದರೆ ಹೇಗೆ? ಈ ಮನೆಯ ಕೆಲಸ ಹೇಗೆ ನಡೆಯಬೇಕು? ಈಗಾಗಲೇ ನಾವು ಮೂರು ದಿವಸ ಹಿಂದೆ ಇದ್ದೇವೆ. ಅದ್ದರಿಂದ ಮುಖ್ಯಮಂತ್ರಿಗಳು ಈ ಬಗ್ಗೆ ಉತ್ತರ ಕೊಟ್ಟ ಮೇಲೆ ಏನಾದರೂ ಡೌಟ್ ಇದ್ದರೆ ಅದನ್ನು ವಿವರಣೆ ಕೇಳುವ ರೂಪದಲ್ಲಿ ಕೇಳಬೇಕೇ ಹೊರತು ಭಾಷಣ ಮಾಡಿದರೆ ಹೇಗೆ?

ಶ್ರೀ ಮಳ್ಳೂರು ಆನಂದರಾವ್.— ಮಾತನಾಡುತ್ತೇವೆ. ಕ್ಲಾರಿಫಿಕೇಷನ್ ಕೇಳುತ್ತೇವೆ. ಅದಕೆ ಸರ್ಕಾರದ ಮಂತ್ರಿಗಳು ಯಾವುದೇ ರೀತಿಯಾದ ಉತ್ತರವನ್ನು ಕೊಡುತ್ತಾರೆ. ಆದರ ಇವತ್ತು ಬಂದಿರುವ ಪ್ರಸಂಗ ಪ್ರಶ್ನೆಯ ಮೇಲೆ ೪-೫ ಕ್ಲಾರಿಫಿಕೇಷನ್ ಕೇಳಿ ಅದಕ್ಕೆ ಸರ್ಕಾರ ಉತ್ತರ ಹೇಳಿದರೆ ಅಷ್ಟಕ್ಕೇ ಮುಗಿಯುವಂಥದ್ದಲ್ಲ. ಯಾರು ಈ ನಿಲುವಳಿ ಸೂಚನೆಗೆ ಸಹಿ ಮಾಡಿದ್ದಾರೆ ಅವರು ಮಾತ್ರ ಮಾತನಾಡಬೇಕೆಂಬ ನಿಬಂಧನೆಯನ್ನು ಹಾಕದೆ ಎಲ್ಲ ಸದಸ್ಯರಿಗೂ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.— ನಾನೂ ಮಾತನಾಡಬೇಕು. ನಾನೂ ಮಾತನಾಡಬೇಕೆಂದರೆ ಅದು ಸರಿಹೋಗುವುದಿಲ್ಲ ತಾವೇ ಇದನ್ನು ಅರ್ಥಮಾಡಿಕೊಳ್ಳಬೇಕು. ಮತ್ತೆ ನಾನು ಮಾನ್ಯ ಸದಸ್ಯರ ಹಕ್ಕನ್ನು ಮೊಟಕು ಮಾಡುವುದಕ್ಕೆ ತಯಾರಾಗಿಲ್ಲ. ಆದರೆ ತಾವು ಈ ಸಭೆಯ ಸಮಯವನ್ನು ನೋಡಿಕೊಂಡು ಸಲಹೆಯನ್ನು ಕೊಟ್ಟರೆ ಬಹಳ ಒಳ್ಳೆಯದೆಂದು ನನ್ನ ಭಾವನೆ.

ಶ್ರೀ ಮಳ್ಳೂರು ಆನಂದರಾವ್.— ಹೊರಗೆ ನಡೆದಿರತಕ್ಕಂತಹ ಘಟನೆಯ ಗಂಭೀರತೆಯನ್ನು ನೋಡಿ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.— ವಿಷಯವನ್ನು ರಿಪಿಟೇಷನ್ ಮಾಡದೇ ಪಾಯಿಂಟ್ಸ್ ಏನಾದರೂ ಬಿಟ್ಟಿದ್ದರೆ ಅಷ್ಟನ್ನು ಮಾತ್ರ ಹೇಳಿ ಮುಗಿಸಿದರೆ ಸಾಕು.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರ).— ಮಾನ್ಯ ಅಧ್ಯಕ್ಷರೆ, ನಾನು ಯಾವತ್ತೂ ಯಾವ ವಿಷಯವನ್ನೂ ರಿಪೀಟ್ ಮಾಡುವುದಿಲ್ಲ. ನಾನು ಹೇಳಬೇಕಾದುದನ್ನು ಹೇಳಿ ಮುಗಿಸುತ್ತೇನೆ. ನಿನ್ನೆ ನಡೆದಿರತಕ್ಕಂತಹ ವಿಷಾದನೀಯ ಘಟನೆ ಏನಿದೆ ಅದು ನಿಜಕ್ಕೂ ವಿಪರ್ಯಾಸ ಎಂದು ಹೇಳಬೇಕಾಗಿದೆ. ಮುಖ್ಯಮಂತ್ರಿಗಳು ನಿನ್ನೆ ಈ ಸಭೆಯಲ್ಲಿ ದಲಿತರ ಹಿತರಕ್ಷಣೆಗಾಗಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸುತ್ತೇನೆಂದು ಒಂದೂವರೆ ಘಂಟೆಗಳ ಕಾಲ ಈ ಸಭೆಯಲ್ಲಿ ಮಾತನಾಡಿದ್ದಾರೆ. ಆದರೆ ಆ ದಲಿತರು ಕಳೆದ ೩-೪ ದಿನಸಗಳಿಂದ ನಡೆದುಕೊಂಡು ಬಂದು ತಮ್ಮನ್ನು ನೋಡಬೇಕು. ಮತ್ತೆ ಮುಖ್ಯಮಂತ್ರಿಗಳನ್ನು ನೋಡಬೇಕೆಂದು ಬಂದಂತಹ ದಲಿತರನ್ನು ಹಿಂಸಾಚಾರ ಮಾಡಿದ್ದಾರೆ. ಇದು ವಿಧಿಯ ವಿಪರ್ಯಾಸ ಎಂದು ಹೇಳಬೇಕಾಗಿದೆ. ನನಗನ್ನಿಸುತ್ತದೆ, ಅವರು ಬಹಳ ಶಾಂತಿಯುತವಾಗಿ ಪ್ರದರ್ಶನ ಮಾಡುತ್ತಿದ್ದರು ಅವರಲ್ಲಿ ಯಾರು ಲಾಟಿಗಳನ್ನು ಹಿಡಿದುಕೊಂಡು ಬಂದಿಲ್ಲ. ರಾಜ್ಯದಲ್ಲಿ ಶ್ರೀ ಶೇಷಗಿರಿಯಪ್ಪನವರ ಕೊಲೆ ಬಗ್ಗೆ ೩ ತಿಂಗಳಿನಿಂದ ಈ ಬಗ್ಗೆ ಯಾವುದೇ ರೀತಿಯ ಸಮಾಧಾನದ ಉತ್ತರ ಸಿಗಲಿಲ್ಲ, ಆದಕ್ಕಾಗಿ ತಮ್ಮನ್ನು ಕೇಳಬೇಕೆಂದು ಬಂದಾಗ ಪೋಲೀಸಿನವರು ಅವರ ಮೇಲೆ ಲಾಠಿ ಚಾರ್ಜ್ ಮಾಡಿರತಕ್ಕಂತಹದ್ದು ಒಂದು ಅಮಾನುಷ ಕೃತ್ಯ ಮತ್ತು ಹೀನಕೃತ್ಯವೆಂದು ನಾನು ಹೇಳಬೇಕಾಗಿದೆ. ಈ ರೀತಿಯಾಗಿ ಶಾಂತಿಯುತವಾಗಿ ಪ್ರದರ್ಶನ ಮಾಡಿದವರ ಮೇಲೆ ಪೋಲೀಸಿನವರು ಈ ರೀತಿ ಲಾಠಿ ಚಾರ್ಜ್ ಮಾಡಿದ್ದಾರೆ. ನಾಳೆ ಅದೇ ಲಾಠಿ ಜನಗಳ ಕೈಗೆ ಬಂದರೆ ಏನಾಗುತ್ತದೆಂಬುದನ್ನು ಪೋಲೀಸಿನವರು ತಿಳಿದುಕೊಂಡಿದ್ದಾರಾ? ಅಸ್ಸಾಮಿನಲ್ಲಿ ಏನಾಗಿದೆ? ಸರ್ಕಾರಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಸರ್ಕಾರದವರು ತಮ್ಮ ಮಾತನ್ನು ಕೇಳದಿದ್ದಕ್ಕೆ ನಮಗೆ ವಿಧಾನ ಮಂಡಲವೂ ಬೇಡ, ಪಾರ್ಲಿಮೆಂಟ್ ಬೇಡ ಎಂಬುದಾಗಿ ಜನರು ತಿರುಗಿ ಬಿದ್ದಿದ್ದಾರೆ. ಮಾನ್ಯ ಗುಂಡೂರಾವ್‌ರವರು ಈ ರಾಜ್ಯದ ಗೃಹ ಮಂತ್ರಿಗಳಾಗಿದ್ದಾರೆ. ಅವರಿಗೆ ಅನೇಕ ಇಲಾಖೆಗಳ ಕೆಲಸದ ಒತ್ತಡದಿಂದಾಗಿ ಕೆಲವು ಇಲಾಖೆಗಳಲ್ಲಿ ಏನು ನಡೆಯುತ್ತಿದೆ ಎಂಬುದು ಅವರಿಗೆ ಅನೇಕ ಸಲ ಗೊತ್ತಾಗುವುದಿಲ್ಲ.

೩-೦೦ ಪಿ. ಎಂ.

ದಯವಿಟ್ಟು ಪೋಲೀಸಿನವರ ಕೈಯ್ಯಲ್ಲಿ ಆಡಳಿತವನ್ನು ಕೊಡಬೇಡಿ. ಇದು ಪ್ರಜಾಪ್ರಭುತ್ವದ ಸರ್ಕಾರ. ಜನರು ತಮ್ಮ ಕಷ್ಟಸುಖಗಳನ್ನು ಇಲ್ಲಿ ಹೇಳಿಕೊಳ್ಳುವುದಕ್ಕೆ ಅವಕಾಶ ಇದೆ. ಜನರೆಲ್ಲರೂ ಮಾನ್ಯ ಮುಖ್ಯಮಂತ್ರಿಯವರ ಬಳಿ ಬಂದು ಮಾತನಾಡುತ್ತಾರೆ, ಇವರೂ ಅವರ ಕಷ್ಟಸುಖಗಳನ್ನು ಹೇಳುತ್ತಾರೆ,

ಸ್ವಲ್ಪ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಗಮನವನ್ನು ಬೇರೆಕಡೆ ಹರಿಸಿರುವುದರಿಂದ ಬಿಜಿಯಾಗಿದ್ದುದರಿಂದ ಇಂತಹ ಅಧಿಕಾರಶಾಹೀ ಆಡಳಿತ ನಡೆದಿದೆ ಇದು ಪ್ರಜಾಪ್ರಭುತ್ವ ಆಡಳಿತವಾಗುವುದಿಲ್ಲ. ಇವತ್ತು ಪೋಲೀಸಿನವರೇ ಆಡಳಿತವನ್ನು ನಡೆಸುತ್ತಿದ್ದಾರೆ ಎನ್ನುವ ರೀತಿ ಇದೆ. ಮೊನ್ನೆ ಕೋಲಾರದಲ್ಲಿ ಪ್ರವಾಸ ಮಾಡುತ್ತಿದ್ದಾಗ ಹಿಂದಿನ ಮಂತ್ರಿಮಂಡಲದಲ್ಲಿದ್ದ ಲಿಂಗಾರೆಡ್ಡಿಯವರನ್ನು ಪೋಲಿಸ್ ಸೂಪರಿಂಟೆಂಡೆಂಟ್ ಉಗಿದು ಹಾಕಿದ ಘಟನೆ. ಆ ಬಗ್ಗೆ ಏನೇನು ನಡೆಯಿತು ಎಂಬುವರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರಿಗೆ ಗೊತ್ತಿದೆ ಮೊನ್ನೆ ಮಲ್ಲೇಶ್ವರಂ ವೃತ್ತದಲ್ಲೂ ಒಂದು ಘಟನೆ ನಡೆಯಿತು ಅಲ್ಲಿ ಜನರ ಕೈಯ್ಯಲ್ಲಿ ಮಚ್ಚು ಸೋಡಾ ಬಾಟ್ಲು, ರೇಜರ್ಸ್ ಇರುವುದನ್ನು ನೋಡಿ ಪೋಲೀಸಿನವರು ಹತ್ತಿರ ಬರಲಿಲ್ಲ.

ಅಧ್ಯಕ್ಷರು.— ಅದನ್ನೆಲ್ಲಾ ಸವಿವರವಾಗಿ ಡಿಸ್ಕಷನ್‌ನಲ್ಲಿ ಮಾತನಾಡಬಹುದು, ಇಲ್ಲಿ ಏನಿದ್ದರೂ ವಿಷಯಕ್ಕೆ ಸಂಬಂಧಪಟ್ಟಿದ್ದನ್ನು ಮಾತ್ರ ಹೇಳಿ.

ಶ್ರೀ ಪಿ. ರಾಂದೇವ್. – ನಾನು ಹೇಳುವುದು, ದುರ್ಬಲ ವರ್ಗದವರ ಮೇಲೆ ಈ ರೀತಿ ವರ್ತಿಸಿರತಕ್ಕದ್ದು ಸರಿಯಲ್ಲ. ಈಗ ಈ ವಿಷಯದಲ್ಲಿ ಬಂಧನಕ್ಕೆ ಒಳಗಾಗಿರುವವರನ್ನು ಬಿಟ್ಟು ಬಿಡಬೇಕೆಂದು ಹೇಳುತ್ತೇನೆ. ನಮ್ಮ ಪೋಲೀಸಿನವರಿಗೆ 'ಕ್ರೌಡ್ ಕಂಟ್ರೋಲ್ ಮೆಥಡ್' ಗೊತ್ತಿಲ್ಲವೆಂದು ಕಾಣುತ್ತದೆ ಅಸ್ಸಾಂನಲ್ಲಿ ಕಳೆದ ೯ ತಿಂಗಳಿನಿಂದಲೂ ಒಂದು ಬಿಸಿ ವಾತಾವರಣ ಇದ್ದಾಗಲೂ ಅಲ್ಲಿ ಪೋಲೀಸರು ಕಂಟ್ರೋಲ್ ಮಾಡಿಕೊಂಡು ಬಂದರು. ಆ ಕಾಲದಲ್ಲಿ ಯಾವ ಸಾವು ನೋವುಗಳೂ ಆಗಲಿಲ್ಲ ಆ ನಂತರ ಸ್ವಲ್ಪ ಸಾವು ನೋವು ಸಂಭವಿಸಿತು. ಆ ರೀತಿಯ ಕಂಟ್ರೋಲ್ ಇಲ್ಲಿ ಮಾಡುವುದಕ್ಕೆ ಆಗುತ್ತಾ ಇಲ್ಲ. ಇಲ್ಲಿ ಜನ ತಮ್ಮ ಅಹವಾಲುಗಳನ್ನು ತೋಡಿಕೊಳ್ಳಲು ವಿಧಾನಸೌಧದ ಬಳಿಗೆ ಬಂದರು ವಿಧಾನಸೌಧದ ಒಳಿ ಬಂದರು ಎಂದು ಹೇಳಿ ಲಾಠಿ ಚಾರ್ಜ್ ಮಾಡುವ ಬದಲು ಅವರನ್ನು ಮೊದಲೇ ತಡೆಯಲು ಆಗುತ್ತಿರಲಿಲ್ಲವೆ? ಈ ಜನರಿಗಿಂತ ಮೊದಲೇ ಪೋಲೀಸರು ಎಕ್ಸೈಟ್ ಆಗುತ್ತಾರೆ. ಆದ್ದರಿಂದ ಈ ಕ್ರೌಡ್ ಕಂಟ್ರೋಲ್ ಮೆಥಡ್‌ನ್ನು ಉಪಯೋಗಿಸಲು ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕೂಡಲೇ ಆದೇಶ ಕೊಡಬೇಕು. ಇದರಿಂದ ಅವರಿಗೆ ಗೌರವ ಬರುತ್ತದೆ. ಈ ರೀತಿ ನಿರ್ಬಲರ ಮೇಲೆ ಹಾಗೂ ಪತ್ರಿಕಾ ವರದಿಗಾರರ ಮೇಲೆ ನಡೆದ ಹಲ್ಲೆಯನ್ನು ನಾನು ಖಂಡಿಸುತ್ತಾ ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಂದ ಸರಿಯಾದ ವಿವರಣೆಯನ್ನು ಬಯಸುತ್ತೇನೆ.

ಶ್ರೀ ಎಚ್ ಡಿ. ದೇವೇಗೌಡ (ಹೊಳೆನರಸೀಪುರ).— ಮಾನ್ಯ ಅಧ್ಯಕ್ಷರೆ ಐದು ದಿವಸಗಳ ಹಿಂದೆ, ಜಾಥಾ ಬರುತ್ತದೆಂದು ಅಚ್ಚು ಮಾಡಿರತಕ್ಕ ಪ್ರಕಟಣಾ ಪತ್ರ ನನ್ನ ಬಳಿಗೆ ಬಂತು ಅದರ ಆಧಾರದ ಮೇಲೆ ಆ ಬಗ್ಗೆ ತಮ್ಮ ಗಮನವನ್ನು ಸೆಳೆಯಲು ಸಭೆಯ ಗಮನವನ್ನು ಸೆಳೆಯಲು ನೋಟೀಸನ್ನು ಕಳುಹಿಸಿದ್ದೆ. ಆ ಬಗ್ಗೆ ಸಭೆಯಲ್ಲಿ ಅವಕಾಶ ಮಾಡಿಕೊಡಬೇಕೆಂದು ಕೇಳಿದ್ದೆ. ಈ ಅಡ್ಜನ್‌ಮೆಂಟ್ ಮೋಷನ್ ಮೇಲೆ ಮಾತನಾಡಲು ನಾನು ಸಹಿ ಮಾಡಿಲ್ಲ. ನಾನು ಮಾತನಾಡಿದರೆ ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ತಾವು ಹೇಳಿದ ಹಾಗೆ ಎರಡು ದಿನಗಳ ಸಭೆ ಹಿಂದೆ ಬಿದ್ದಿದೆ. ನಾನು ಸದನದ ಹೆಚ್ಚಿನ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಕೇವಲ ಎರಡು ವಿಷಯಗಳ ಬಗ್ಗೆ ಕೇಳುತ್ತೇನೆ. ಬಡ್ಜೆಟ್ ಡಿಸ್ಕಷನ್. ತಾವು ಹೇಳಿದ ಹಾಗೆ ಮೂರು ದಿನ ಹಿಂದೆ ಬಿದ್ದಿದೆ. ಆದುದರಿಂದ ಇವೊತ್ತು ಶ್ರೀಮಾನ್ ಲಕ್ಷ್ಮೀಸಾಗರ್, ಶ್ರೀ ಬಸವಲಿಂಗಪ್ಪ ಹಾಗೂ ಶ್ರೀ ಆರ್ಮುಗಂ ಅವರು ಏನು ಹೇಳಿದ್ದಾರೆ ಅದನ್ನು ಬೆಂಬಲಿಸಿ ಮಾನ್ಯ ಮುಖ್ಯಮಂತ್ರಿಯವರು ಒಂದು ವಿಷಯದ ಬಗ್ಗೆ ದಯಮಾಡಿ ವಿವರಣೆ ಕೊಡಬೇಕೆಂದು ಹೇಳುತ್ತೇನೆ. ಈ ಕೊಲೆ ಮೊಕದ್ದಮೆಯಲ್ಲಿನ ಎಲ್ಲಾ ಅಪರಾಧಿಗಳನ್ನು ಬಿಡುಗಡೆ ಮಾಡಿರುವುದರಿಂದ ಅದರ ವಿರುದ್ಧವಾಗಿ ಈ ದಲಿತ ಸಂಘರ್ಷ ಸಮಿತಿಯವರು ಪ್ರತಿಭಟನೆ ಸೂಚಿಸಲು ಬಂದಿದ್ದಾರೆ. ಎರಡನೆಯದಾಗಿ ಕಾನೂನಿನಲ್ಲಿ ಏನಾದರೂ ದೋಷ ಇದ್ದರೆ. ವಿಧೇಯಕದಲ್ಲಿ ಏನಾದರೂ ದೋಷ ಇದ್ದರೆ ಅದನ್ನು ತಿದ್ದುಪಡಿ ಮಾಡಬೇಕೆಂದು ಅವರ ಬೇಡಿಕೆಯಲ್ಲಿ ತಿಳಿಸಿದ್ದಾರೆ. ಇವತ್ತು ನಿಮ್ಮ ಅಧಿಕಾರಿಗಳು ಇನ್‌ವೆಸ್ಟಿಗೇಷನ್‌ನಲ್ಲಿ ಕರ್ತವ್ಯ ಲೋಪ ಮಾಡಿ, ಈ ಒಂದು ಕೊಲೆ ಅಪಾದನೆಯಲ್ಲಿ ಯಾರು ಯಾರು ತುತ್ತಾಗಿದ್ದಾರೋ ಅವರೆಲ್ಲರನ್ನೂ ಕೊಲೆ ಕೇಸ್ ಇತ್ಯರ್ಥ ಆಗುವುದಕ್ಕೆ ಪೂರ್ವ ಭಾವಿಯಾಗಿ ಬಿಡುಗಡೆ ಮಾಡಿರುವುದಕ್ಕೆ ಕಾರಣ ಏನು ? ತನಿಖೆಯಲ್ಲೇನಾದರೂ ದೋಷ ಇದೆಯೋ ? ಪೋಲೀಸಿನವರು ಚಾರ್ಜ್‌ಶೀಟ್ ಹಾಕುವುದರಲ್ಲಿ ಕರ್ತವ್ಯ ಲೋಪವಾಗಿದೆಯೆ ? ಕಾನೂನಿನಲ್ಲಿ ದೋಷ ಇದೆಯೆ? ಹೈಕೋರ್ಟಿನಲ್ಲಿ ಉತ್ತಮವಾದ ಅಡ್ವೋಕೇಟ್ ಜನರಲ್ ಇದ್ದಾರೆಂದು ತಾವೇ ಹೇಳಿದ್ದೀರಿ. ಈ ಒಂದು ಬೇಲ್ ಮೇಲೆ ರಿಲೀಜ್ ಮಾಡಿರುವುದಕ್ಕೆ ಸರ್ಕಾರಿ ವಕೀಲರೇನಾದರೂ

ವಿರೋಧಿಸಿ ಪ್ರತಿಭಟನೆ ಸಲ್ಲಿಸಿದ್ದಾರೆಯೋ? ಇದರ ಬಗ್ಗೆ ತಾವು ವಿವರಣೆಯನ್ನು ಕೊಡಬೇಕೆಂದು ವಿನಂತಿಸಿ ಕೊಳ್ಳುತ್ತೇನೆ. ಇದರ ಪೂರ್ಣ ಹೊಣೆಯನ್ನು ಹಿಂದಿನ ಸರ್ಕಾರ ಹೊತ್ತುಕೊಳ್ಳಬೇಕಾಗುತ್ತದೆ. ನಾನು ಕಟುವಾಗಿ ಹೇಳುತ್ತಿದ್ದೇನೆ ಎಂದು ಯಾರೂ ಭಾವಿಸಬಾರದು. ದಿನಾಂಕ ೧-೨-೧೯೭೯ ರಿಂದ ಕಳೆದ ಜನವರಿಯವರೆಗೆ ಸುಮಾರು ೨೦ ಅರ್ಜಿಗಳನ್ನು ತನಗೆ ರಕ್ಷಣೆ ಕೊಡಬೇಕೆಂದು ಶೇಷಗಿರಿಯಪ್ಪ ಸರ್ಕಾರಕ್ಕೆ ಕೇಳಿಕೊಂಡರೂ ಸಹಾ ಆತನಿಗೆ ರಕ್ಷಣೆ ಕೊಡಲಿಲ್ಲವೆಂದರೆ, ಅಧಿಕಾರದಲ್ಲಿದ್ದವರು ಇದರ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗುತ್ತದೆಂದು ಹೇಳುತ್ತೇನೆ. ಸ್ವಾಮಿ ನಾನು ಮೊದಲೇ ಒಂದು ಮಾತನ್ನು ಹೇಳಿದೆ. ಇಲ್ಲಿಯ ರಾಜಕಾರಣಿಯೊಬ್ಬರು ಸ್ಥಳೀಯ ಐ.ಜಿ.ಪಿ. ತರಹ ಕೆಲಸ ಮಾಡಿದ್ದು ಉಂಟು. ಸಬ್ ಇನ್ಸ್‌ಪೆಕ್ಟರ್‌ರವರ ಮೇಲೆ ಕೈ ಮಾಡಿ ಸರ್ಕಾರದಲ್ಲಿ ಬೆಂಬಲವನ್ನು ಪಡೆದು ಕೊಂಡ ಕಾಲವೂ ಉಂಟು. ಈಗಿನ ಮಾನ್ಯ ಮುಖ್ಯಮಂತ್ರಿಗಳು ಹೊಸ ಆಡಳಿತವನ್ನು ತರುತ್ತೇವೆಂದು ಹೊರಟಿದ್ದಾರೆ. ಶಾಸಕರಿಗೆ ಅನಾವಶ್ಯಕವಾಗಿ ಅಧಿಕಾರಿಗಳ ಹತ್ತಿರ ಹೋಗಬೇಡಿ, ಆಗಬೇಕಾದ್ದನ್ನೆಲ್ಲಾ ಮಂತ್ರಿ ಮಂಡಲದ ಮಟ್ಟದಲ್ಲೇ ಮಾಡಿಸುತ್ತೇನೆ. ಸರ್ಕಾರಿ ಮಂತ್ರಿಗಳಿಗೆ ಹೇಳಿ, ಸಚಿವ ಸಂಪುಟ ಮಟ್ಟದಲ್ಲಿಯೇ ಕೆಲಸವನ್ನು ಮಾಡುತ್ತೇವೆಂದು ಹೇಳಿದ್ದಾರೆ ಒಂದು ಮಾತನ್ನು ನಾನು ಇಲ್ಲಿ ಕೇಳು ತ್ತೇನೆ. ಇಲ್ಲಿ ಕೊಲೆ ಅಪರಾಧಿ ಒಬ್ಬ ರಾಜಕೀಯ ಪ್ರಭಾವದ ವ್ಯಕ್ತಿ ಎನ್ನುವುದು ಪ್ರಶ್ನೆ. ಇಂದು ಹೈಕೋರ್ಟಿನಲ್ಲಿ ರಿಲೀಜ್ ಮಾಡುವುದಕ್ಕೆ ರಾಜಕೀಯ ಪ್ರಭಾವ ಇದೆಯೆ? ಕಾನೂನು ಪರಿಪಾಲನೆ ಮಾಡುವುದರಲ್ಲಿ ಲೋಪವೇನಾದರೂ ಇದೆಯೋ ? ಈ ಬಗ್ಗೆ ಹೊರಗಡೆ ಒತ್ತಡ ಜಾಸ್ತಿ ಇದೆ. ಕಾರಣ ಯಾರು ಇಲ್ಲಿ ಕಾನೂನಿನ ಲೋಪ ಮಾಡಿದ್ದಾರೆ? ನಾನು ಇಲ್ಲಿ ಹೈಕೋರ್ಟಿನ ತೀರ್ಪಿನ ಬಗ್ಗೆ ಮಾತ ನಾಡುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಆತ ಕಳೆದ ಒಂದು ವರ್ಷದಿಂದ ಅಷ್ಟೊಂದು ಅರ್ಜಿ ಕೊಟ್ಟಿದ್ದರೂ ಏಕೆ ಅವನಿಗೆ ರಕ್ಷಣೆ ಕೊಡಲಿಲ್ಲ. ನೀವು ಮೇಲ್ಮಟ್ಟದ ಅಧಿಕಾರಿಗಳು ಹೇಳಿದ ಹಾಗೆ ಕೇಳುವುದಕ್ಕೆ ಹೋಗದೆ, ಇದಕ್ಕೆ ಸಂಬಂಧಪಟ್ಟ ಸ್ಥಳೀಯ ಳ ಜನ ಅಧಿಕಾರಿ ಗಳನ್ನು ಸಸ್ಪೆಂಡ್ ಮಾಡಿ. ಯಾಕೆ ಆಗುವುದಿಲ್ಲ? ಏಕೆ ರಕ್ಷಣೆಯನ್ನು ಕೊಡಲಿಲ್ಲ? ಪಾಪ ಆತನ ಸತ್ತ ಹೆಣದ ಫೋಟೋವನ್ನು ನೋಡಿದಾಗ, ಸತ್ತ ದನದ ಮೈನಂತೆ ಊದಿಕೊಂಡಿತ್ತು. ಇದನ್ನು ನೋಡಿ ದರೆ ಮನಸ್ಸಿನ ಮೇಲೆ ಎಷ್ಟು ಖೇದ ಉಂಟಾಗುತ್ತದೆಂಬುದೇನಾದರೂ ಗೊತ್ತೆ ? ಇದು ನಾಗರೀಕ ಸರ್ಕಾರ ಅಲ್ಲ ಎಂದು ಅನಿಸುತ್ತದೆ. ಅವರ ಕುಟುಂಬದವರಿಗೆ ೫,೦೦೦ ರೂಪಾಯಿಯನ್ನು ಉದಾರ ವಾಗಿ ಕೊಟ್ಟಿದ್ದೀರೆಂದು ತಾವು ಬರೆದಿದ್ದೀರಿ. ಇವತ್ತು ಈ ಪ್ರಕರಣದಲ್ಲಿ ಇನ್‌ವಾಲ್ ಆಗಿರುವವರು ಹೊರಗೆ ಬರುವುದಕ್ಕೆ ಕಾರಣ ಏನು? ಇದರಿಂದ ಕೊಲೆ ಮಾಡುವುದು ಬಹಳ ಸಲಭವಾಯಿತು. ಕೇಸ್ ಇತ್ಯಾರ್ಥವಾಗುವುದಕ್ಕೆ ಮುಂಚೆ ಹೈಕೋರ್ಟ್ ಬೇಲ್ ಮೇಲೆ ಬಿಡುವ ಪರಿಸ್ಥಿತಿಗೆ ಹೋದರೆ ಯಾರು ಬೇಕಾದರೂ ಕೊಲೆ ಮಾಡಬಹುದು. ಸೊಗಸಾಗಿ ಕೊಲೆ ಮಾಡಿ, ದಕ್ಕಿಸಿಕೊಳ್ಳುವ ಶಕ್ತಿ, ರಾಜಕೀಯದ ಶಕ್ತಿ, ಪ್ರಭಾವ ಇದ್ದರೆ ಪಾರಾಗಬಹುದು. ಆದ್ದರಿಂದ ನಿಮ್ಮ ಕಾಲದಲ್ಲಿ ಇದಕ್ಕೆ ಅವಕಾಶವನ್ನು ಕೊಡುವುದಿಲ್ಲವೆಂಬ ವಾಗ್ದಾನ ಕೊಡಬೇಕು. ಆ ಕುಟುಂಬಕ್ಕೆ ಅನಾಹಿತವಾಗಿದೆ, ಪರಿಹಾರ ಕೊಡ ಬೇಕೆಂಬ ವಾದವನ್ನು ಈ ಸಂಬಂಧದಲ್ಲಿ ಹೇಳುವುದಿಲ್ಲ. ಈ ಬಗ್ಗೆ ಹೆಚ್ಚಿನ ಸಹಾನುಭೂತಿಯನ್ನು ತೋರಿಸಬೇಕು ಕರ್ತವ್ಯ ಲೋಪ ಮಾಡಿರುವ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದು ಕೊಳ್ಳಬೇಕು. ಇದಕ್ಕೆ ಶಾಸಕರು, ರಾಜಕಾರಣಿಗಳು, ಎಸ್.ಪಿ. ಯವರು ಕಾರಣರೇ? ದಯಮಾಡಿ ಮುಚ್ಚುಮರೆ ಇಲ್ಲದೇ ತಿಳಿಸಬೇಕೆಂದು ಹೇಳಿ, ಪತ್ರಿಕಾ ಕರ್ತರ ಮೇಲೆ ಏಕೆ ಹಲ್ಲೆ ಮಾಡಿದರು? ಅವರು ಫೋಟೋ ತೆಗೆದುಕೊಳ್ಳುತ್ತಾರಲ್ಲಾ ಎಂದು ಹೊಡೆದರೆ? ಈ ತರಹ ನಾಲ್ಕಾರು ಘಟನೆಗಳು ನಡೆದಿವೆ. ಈ ರೀತಿ ಆಗದಂತೆ ತಾವು ಅಧಿಕಾರಿಗಳನ್ನು ಕರೆಸಿ ಅವರಿಗೆ ಸರಿಯಾದ ಸೂಚನೆಯನ್ನು ಕೊಡಬೇಕೆಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಚೌಡಯ್ಯ (ಭರಮಸಾಗರ).— ಮಾನ್ಯ ಅಧ್ಯಕ್ಷರೆ. ನಮ್ಮ ವಿರೋಧ ಪಕ್ಷದ ಉಪ ನಾಯಕರಾದ ಶ್ರೀ ಬಸವಲಿಂಗಪ್ಪನವರು ತಂದಿರತಕ್ಕ ವಿಷಯದ ಬಗ್ಗೆ ನನ್ನ ಮಿತ್ರರೆಲ್ಲರೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ನಾನು ಈ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡದೇ ಸರಕಾರಕ್ಕೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಈಗ ಇರತಕ್ಕ ಸರ್ಕಾರವನ್ನು ಪೋಲೀಸ್ ಸರಕಾರ ಎಂದು ಕರೆ ಯೋಣವೊ? ಅಥವಾ ನಾಗರೀಕ ಸರಕಾರವೆಂದು ಕರೆಯೋಣವೊ ? ಒಂದು ಕಡೆಯಲ್ಲಿ ರಕ್ಷಣೆ ಸಿಕ್ಕು ತ್ತದೆ ಎಂದುಕೊಂಡರೆ ಅಲ್ಲಿ ಪೋಲೀಸಿನವರು ಇರುವುದಿಲ್ಲ. ಇನ್ನೊಂದು ಕಡೆ ಪೋಲೀಸ್ ಇದ್ದರೂ ಕೂಡ ಅಲ್ಲಿ ಆಕ್ಷನ್ ತೆಗೆದುಕೊಳ್ಳುವುದಿಲ್ಲ. ನಿನ್ನೆ ನಡೆದ ಘಟನೆ ಬಗ್ಗೆ ಹೇಳುವುದಾದರೆ ಇಲ್ಲಿ ಸುಮಾರು

ಮೂರು ನೂರು ಜನರು, ಇವರಲಿ ಹೆಚ್ಚಿನವರು ಯುವಕರು ಹಾಗೂ ಹೆಣ್ಣು ಮಕ್ಕಳು ಒಂದು ಹರಿಜನ ಕುಟುಂಬದಲ್ಲಿ ನಡೆದ ಒಂದು ಘಟನೆ ಬಗ್ಗೆ ತಮ್ಮ ಕೋರಿಕೆಯನ್ನು ಅವರು ಸರ್ಕಾರದ ಮುಂದೆ ಬಂದು ಈ ರಾಜಧಾನಿಗೆ ಬಂದು ನಮಗಾಗಿ ಒಂದು ಸರ್ಕಾರ ಇದೆ, ನಾವು ಓಟು ಕೊಟ್ಟಿರುವ ಸರ್ಕಾರ ನಮಗೆ ಭರವಸೆ ಕೊಡುತ್ತದೆ, ರಕ್ಷಣೆ ಕೊಡುತ್ತದೆ ಎಂದು ನಂಬಿಕೊಂಡು ಎರಡು ದಿವಸಗಳಿಂದ ಅವರು ಅನ್ನಾಹಾರಗಳಿಲ್ಲದೆ ಸುಮಾರು ೪೫ ಮೈಲಿಗಳ ದೂರದಿಂದ ನಡೆದುಕೊಂಡು ಬಂದಿದ್ದರು.

ಇದನ್ನು ನೋಡಿದರೆ ನಿಜವಾಗಿಯೂ ಕೂಡ ಹೃದಯ ವಿದ್ರಾವಕವಾಗುವಂಥ ವಿಚಾರವಾಗಿರುತ್ತದೆ. ಇದರ ಬಗ್ಗೆ ಪತ್ರಿಕಾ ಕರ್ತರು ಬಹಳ ಚೆನ್ನಾಗಿ ವರದಿ ಮಾಡಿರುತ್ತಾರೆ. ಅವರನ್ನು ನಿಜವಾಗಿಯೂ ಅಭಿನಂದಿಸಬೇಕಾಗಿದೆ. ಮತ್ತು ಯಾರು ನೊಂದವರಿಗೆ ಸಹಾಯ ಮಾಡಬೇಕೆಂದು ಹೊರಟರೋ ಅವರಿಗೆ ಹೊಡೆತ ಬಿದ್ದಿರುತ್ತದೆ. ಶ್ರೀಮಾನ್ ಇಂದೂಧರ್ ರವರಿಗೆ ಹೊಡೆತ ಬಿದ್ದಿರುವುದನ್ನು ನೋಡಿದರೆ ವರದಿಗಾರರಿಗೆ ನಾವು ಸರಿಯಾಗಿ ವರದಿ ಮಾಡುವುದು ಹೇಗೆ ಎನ್ನುವ ಒಂದು ಭಯದ ವಾತಾವರಣ ಉಂಟಾಗಿರುತ್ತದೆ. ಇದರ ಹಿನ್ನೆಲೆ ಏನು ಎನ್ನುವುದು ಒಂದು ಅರ್ಥವಾಗುವುದಿಲ್ಲ. ನೊಂದ ಜನ ಬಹುಶಃ ಅವರ ತಾಳ್ಮೆ ಮೀರಿದಾಗ ಏನು ಆಗುತ್ತದೆ ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದಲ್ಲ ಒಂದು ದಿವಸ ಸ್ಫೋಟವಾಗುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಲಕ್ಷಾಂತರ ಜನ ಅಂದರೆ ನಮ್ಮ ದೇಶದಲ್ಲಿ ೧೦೦ಕ್ಕೆ ೮೦ ಜನ ಬಡವರೇ ಇದ್ದಾರೆ. ಅದರಲ್ಲೂ ಹೆಚ್ಚಾಗಿ ದೀನದಲಿತರೇ ಇರುತ್ತಾರೆ ಯಾರು ಅನ್ಯಾಯಕ್ಕೆ ಒಳಪಟ್ಟು ನ್ಯಾಯವನ್ನು ದೊರಕಿಸಿಕೊಳ್ಳಲು ಮತ್ತು ತಮ್ಮ ರಕ್ಷಣೆಯನ್ನು ಕೋರಿ ಬಂದರೋ ಅವರ ಮೇಲೆ ನಿನ್ನೆಯ ದಿವಸ ಈ ರೀತಿಯಾದ ಒಂದು ದೌರ್ಜನ್ಯಕೃತ್ಯ ನಡೆದಿದೆ. ಯಾರ ಕೊಲೆ ನಡೆದಿದೆಯೋ ಅವರ ಹೆಣ್ಣು ಮಗಳನ್ನು ಹೊಡೆದಿದ್ದಾರೆ. ಇನ್ನೊಬ್ಬ ಅವರ ತಾಯಿಯನ್ನು ಹೊಡೆದಿದ್ದಾರೆ. ಈ ರೀತಿಯಾಗಿ ೬ ಜನ ಆಘಾತಕ್ಕೆ ಒಳಗಾಗಿದ್ದಾರೆ ಅವರೆಲ್ಲರೂ ಚಿಕಿತ್ಸೆಯನ್ನು ಪಡೆಯಲು ಆಸ್ಪತ್ರೆಗೆ ಸೇರಿ ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದನ್ನು ನೋಡಿದರೆ ಎಂಥವರಿಗೂ ಮರುಕ ಉಂಟಾಗುವಂಥ ವಿಷಯವಾಗಿರುತ್ತದೆ. ಸುಮಾರು ನಾಲ್ಕುವರೆ ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಸಂದರ್ಶನ ಕೊಡುತ್ತಾರೆಂದು ವರದಿಯಾಗಿತ್ತು. ೬ ಗಂಟೆಯವರೆಗೆ ಕಾದಿದ್ದರು, ಅಲ್ಲಿಯವರೆಗೂ ಅವರಿಗೆ ಮಾನ್ಯ ಮುಖ್ಯಮಂತ್ರಿಯವರ ಸಂದರ್ಶನ ದೊರಕಲಿಲ್ಲ. ಮಾನ್ಯ ಶಾಸನ ಸಭಾ ಅಧ್ಯಕ್ಷರವರು ಕೂಡ ನೋಡುತ್ತಾರೆಂದು ವರದಿಯಾಗಿತ್ತು. ಹೀಗೆ ತಮ್ಮನ್ನು ನೋಡಿ ಯಾವುದಾದರೂ ಪರಿಹಾರ ದೊರಕುತ್ತದೆಂದು ಕಾದಿದ್ದವರಿಗೆ ಯಾವ ವಿವಾದ ಪರಿಹಾರವು ರಕ್ಷಣೆಯೂ ದೊರಕದೆ ಪೋಲೀಸಿನವರ ಅಮಾನುಷಕೃತ್ಯಕ್ಕೆ ಗುರಿಯಾಗಿರುವುದನ್ನು ನೋಡಿದರೆ ಇದೇನು ಮಿಲಿಟರಿ ಸರ್ಕಾರವೇ ಎಂದು ಕೇಳಬೇಕಾಗುತ್ತವೆ ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಕೂಡಲೇ ಸೂಕ್ತ ಕ್ರಮವನ್ನು ತೆಗೆದುಕೊಂಡು ದೀನದಲಿತರಿಗೆ, ನೊಂದಂಥ ಜನರಿಗೆ ನ್ಯಾಯ ಮತ್ತು ಪರಿಹಾರವನ್ನು ದೊರಕಿಸಿ, ಈ ಕೊಲೆಯ ವಿಚಾರವನ್ನು ಸರಿಯಾದ ರೀತಿಯಲ್ಲಿ ವಿಚಾರಣೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತಾ. ಶ್ರೀಮಾನ್ ಬಸವಲಿಂಗಪ್ಪನವರು ಮಂಡಿಸಿರತಕ್ಕಂಥ ನಿಲುವಳಿ ಸೂಚನೆಯನ್ನು ತಾವು ಅಂಗೀಕರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಾಬುರಾವ್ ದೇಶಪಾಂಡೆ (ಧಾರವಾಡ). ಸನ್ ಮಾನ್ಯ ಅಧ್ಯಕ್ಷರೇ ಈಗ ರಾಜ್ಯದ ಮುಂದಿರತಕ್ಕಂಥ ಸಮಸ್ಯೆಯ ಬಗ್ಗೆ ಸರ್ಕಾರದ ನೀತಿ ಏನು ಎನ್ನುವುದು ಒಂದು ಮಹತ್ವದ ಪ್ರಶ್ನೆಯಾಗಿದೆ. ಏಕೆಂದರೆ ಶ್ರೀಮಾನ್ ಗುಂಡೂರಾಯರು ಮುಖ್ಯ ಮಂತ್ರಿಗಳಾದ ಮೇಲೆ ಒಂದು ಪ್ರಕಟಣೆಯನ್ನು ಕೊಟ್ಟರು. ಅದೇನೆಂಗರೆ ಧರ್ಮ ದರ್ಶನವನ್ನು ಕೊಡುತ್ತೇವೆ, ತಮ್ಮನ್ನು ಕಾಣಲು ಅವಕಾಶವಿದೆ ಎಂದು. ದೀನದಲಿತರು ತಮ್ಮ ಕುಟುಂಬದ ಮೇಲೆ ಆಗಿರತಕ್ಕಂಥ ಅತ್ಯಾಚಾರ, ಕೊಲೆ, ದಬ್ಬಾಳಿಕೆ ಈ ವಿಷಯವನ್ನು ರಾಜಧಾನಿಗೆ ಬಂದು ತಿಳಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳ ಸಂದರ್ಶನಕ್ಕಾಗಿ ಕಾದಿದ್ದವರಿಗೆ ಅವರ ಭೇಟಿಗೆ ಅವಕಾಶವಾಗಲಿಲ್ಲ. ಸರ್ಕಾರದ ಗಮನಕ್ಕೆ ಈ ರೀತಿಯಾದ ಸಮಸ್ಯೆಗಳು ಬಂದರೆ ಅವಕ್ಕೆ ಪರಿಹಾರ ಕಂಡುಹಿಡಿದು ಅವರಿಗೆ ಸಮಾಧಾನ ಹೇಳತಕ್ಕಂಥದ್ದರ ಬಗ್ಗೆ ವಿಚಾರ ಮಾಡತಕ್ಕಂಥದ್ದು ಪ್ರಶ್ನೆ ಇತ್ತು. ಅದಕ್ಕೆ ಬದಲಾಗಿ ದಮನ ರೀತಿಯನ್ನು ಅವರ ಮೇಲೆ ಅನುಸರಿಸಲಾಯಿತು. ಈ ದೇಶದಲ್ಲಿ ಪ್ರಜಾಪ್ರಭುತ್ವದಲ್ಲಿ ಅನ್ಯಾಯವಾಗಿದ್ದರೆ ಅದನ್ನು ಪ್ರತಿಭಟಿಸುವ ಹಕ್ಕು ಜನರಿಗೆ ಇರುತ್ತದೆ, ಆ ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಆ ಒಂದು ದೃಷ್ಟಿಯಿಂದ ಅನ್ಯಾಯವಾಗಿರತಕ್ಕಂಥ ಜನ ತಮ್ಮ ದುಃಖವನ್ನು ಹೇಳಿಕೊಳ್ಳಲಿಕ್ಕೆ ಬಂದರೆ ಆ ಕಾಲಕ್ಕೆ ಸರ್ಕಾರದವರು ದಮನ ರೀತಿಯನ್ನು ಅನುಸರಿಸದೆ ಅವರಿಗೆ ನ್ಯಾಯ ರೀತಿಯನ್ನು ಅನುಸರಿಸಬೇಕಾಗಿತ್ತು.

ಎರಡನೆಯದೇನೆಂದರೆ ಮಾನ್ಯ ಅಧ್ಯಕ್ಷರೆ ತಾವು ಈ ಸದನದ ಅಧ್ಯಕ್ಷರೂ ಅಲ್ಲದೆ ಕರ್ನಾಟಕ ಪ್ರತಿನಿಧಿಯಾಗಿದ್ದೀರಿ. ದಲಿತರು ತಮ್ಮನ್ನು ಭೇಟಿಯಾಗಿ ತಮಗಾಗಿರುವ ಅನ್ಯಾಯವನ್ನು ಹೇಳಿಕೊಳ್ಳಲು ಬಂದರೆ. ಅವರಿಗೆ ಅವಕಾಶವನ್ನು ಏತಕ್ಕೆ ಕೊಡಲಿಲ್ಲ? ಇದೂ ಕೂಡ ವಿಚಾರಣೆಯಾಗಬೇಕು. ನ್ಯಾಯವನ್ನು ದೊರಕಿಸಿಕೊಳ್ಳಲು ಬಂದಂಥ ಜನರ ಮೇಲೆ ಪೋಲೀಸಿನವರು ದಮನ ರೀತಿಯನ್ನು ಅನುಸರಿಸಿದ್ದೂ ವಿಚಾರಣೆಯಾಗಬೇಕು. ಈ ಸಮಯದಲ್ಲಿ ಪತ್ರಿಕಾ ಕರ್ತರ ಮೇಲೆ, ದಲಿತರ ಮೇಲೆ ಲಾಟಿ ಚಾರ್ಜ್ ಆಗಿರುತ್ತದೆ. ಅದೂ ಕೂಡ ವಿಚಾರಣೆಯಾಗಬೇಕು. ನಿನ್ನೆ ನಡೆದ ಧಮನ ಕೃತ್ಯದ ಬಗ್ಗೆ ತಪ್ಪಿತಸ್ಥರು ಯಾರು ಇರುತ್ತಾರೋ ಅವರಿಗೆ ಸರಿಯಾದ ಶಿಕ್ಷೆಯನ್ನು ವಿಧಿಸಬೇಕು. ಜೊತೆಗೆ ಮೂಲವಾಗಿ ಇರತಕ್ಕಂಥ ಕೊಲೆ ಇದರ ಬಗ್ಗೆ ಸರಿಯಾದ ವಿಚಾರಣೆಯಾಗಬೇಕು. ಇದು ಒಂದು ಬಲ್ಕಾರ ಘಟನೆಯಾಗಿರುತ್ತದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಮಾನ್ಯ ಸಭಾಧ್ಯಕ್ಷರೇ ನೆನ್ನೆ ನಡೆದಂಥ ಒಂದು ಘಟನೆ ಏನು ಇದೆ, ಅದೇ ಸಮಯದಲ್ಲಿ ದಲಿತರ ಬಗ್ಗೆ, ದಲಿತರ ಸ್ಥಾನಮಾನದ ಬಗ್ಗೆ ದಲಿತರ ಪ್ರತಿನಿಧಿಗಳು ಅದನ್ನು ಕಾಪಾಡುವುದಕ್ಕೋಸ್ಕರವಾಗಿ ನಮ್ಮ ಶ್ರೀಮಾನ್ ಬಸವಲಿಂಗಪ್ಪನವರ ನಿರ್ಣಯದ ಮೇಲೆ ಚರ್ಚೆ ಮಾಡಿದರು. ಆದಾದಮೇಲೆ ಚರ್ಚೆಯ ಕಾಲದಲ್ಲಿ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಹರಿಜನ ಗಿರಿಜನರ ಬಗ್ಗೆ ಸರ್ಕಾರವೂ ಕೂಡ ಒಂದು ಹೆಚ್ಚಿನ ವಿಶ್ವಾಸವನ್ನು ಇಟ್ಟುಕೊಂಡಿರುತ್ತದೆ, ಮತ್ತು ನಾವು ಕೂಡ ನಮ್ಮ ಕರ್ತವ್ಯವನ್ನು ಅರಿತು ಕೆಲಸ ಮಾಡುತ್ತೇವೆಂದು ಹೇಳುತ್ತಿದ್ದ ಸಮಯದಲ್ಲಿಯೇ ದಲಿತರ ಮೇಲೆ ಅತ್ಯಾಚಾರ ನಡೆದಿರುತ್ತದೆ. ಇದಕ್ಕೆ ಕಾರಣಕರ್ತರು ಯಾರು ? ಈಗಾಗಲೇ ಮಾನ್ಯ ದೇವೇಗೌಡರು ಹೇಳಿದಹಾಗೆ, ಈಗ ವಿಧಾನ ಸಭೆಯು ನಡೆಯುತ್ತಿರುವ ಸಮಯದಲ್ಲಿ ಯಾರು ಒಂದು ಅನ್ಯಾಯಕ್ಕೆ ಒಳಗಾಗಿದ್ದರು ಅವರು ನಮಗೆ ನ್ಯಾಯ ದೊರಕುತ್ತದೆಂದು ಉದ್ದೇಶ ಇಟ್ಟುಕೊಂಡು ೯ನೇ ತಾರೀಖು ಊರಿಂದ ಹೊರಟು ೧೨ನೇ ತಾರೀಖು ರಾಜಧಾನಿಗೆ ಬಂದು ಒಂದು ಗಂಟೆಯ ಮೇಲೆ ಈ ಸ್ಥಳಕ್ಕೆ ಬಂದು ತಮ್ಮ ಪ್ರತಿಭಟನೆಯನ್ನು ಸೂಚಿಸಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದರು. ಆದರೆ ಅವರಿಗೆ ನಾಲ್ಕುವರೆ ಗಂಟೆಗಳಾದರೂ ಅವರಿಗೆ ಮುಖ್ಯಮಂತ್ರಿಗಳ ಭೇಟಿಯಾಗಲಿಲ್ಲ. ಮುನ್ನೂರು ಜನರು ಮೂವತ್ತು ಮೈಲಿ ದೂರದಿಂದ ನಡೆದುಕೊಂಡು ಬಂದರೆ ಮಾನ್ಯ ಮುಖ್ಯ ಮಂತ್ರಿಗಳು ಕಾಲಾವಕಾಶವನ್ನು ಮಾಡಿಕೊಂಡು ಅವರ ಪ್ರತಿನಿಧಿಗಳನ್ನು ಬರಮಾಡಿಕೊಂಡು ವಿಚಾರಣೆ ಮಾಡಿದ್ದರೆ ಈ ರೀತಿಯಾದ ಒಂದು ಘಟನೆ ನಡೆಯುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಮಾನ್ಯ ಅಧ್ಯಕ್ಷರೇ ತಾವು ದಲಿತ ವರ್ಗದ ನಾಯಕರು, ದಲಿತ ವರ್ಗದವರ ಮೇಲೆ ಹೆಚ್ಚಿನ ವಿಶ್ವಾಸ ಇಟ್ಟುಕೊಂಡಿರುವ ತಾವು ಕೂಡ ಅವರಿಗೆ ಭೇಟಿಯಾಗಲು ಅವಕಾಶ ಮಾಡಿಕೊಡಲಿಲ್ಲ.

ಅಧ್ಯಕ್ಷರು.—ತಾವು ಆ ರೀತಿ ಮಾತನಾಡಬಾರದು. ನಾನು ಸದನದಲ್ಲಿದ್ದಾಗ ಅವರನ್ನು ಹೋಗಿ ನೋಡಲೇ ? ೩ ಜನ ಬಂದಿದ್ದರೆಂದು ಕಾಣುತ್ತದೆ. ಅವರನ್ನು ಸಂಜೆ ೪ ಗಂಟೆಗೆ ಬರಬೇಕೆಂದು ಹೇಳಿಕಳಿಸಿದ್ದಾಗಿತ್ತು. ಆದರೆ ದಯವಿಟ್ಟು ಈ ರೀತಿ ನೀವು ನನ್ನ ಮೇಲೆ ಆರೋಪ ಮಾಡಬೇಡಿ.

ಶ್ರೀ ಎಂ. ಚಂದ್ರಶೇಖರ್.—ಆ ದಲಿತ ವರ್ಗದ ಜನ ಮಾನ್ಯ ಬಸವಲಿಂಗಪ್ಪನವರನ್ನು ಕೇಳಲಿಲ್ಲ; ಮಾನ್ಯ ಆರ್ಮುಗಂರವರನ್ನು ಕೇಳಲಿಲ್ಲ. ಅವರು ತಮ್ಮನ್ನು ಕೇಳಿಕೊಂಡು ಬಂದಿದ್ದರು. ಕಾರಣ ನೀವು ಅವರ ವಿಚಾರವನ್ನು ಕೇಳುತ್ತೀರೆಂಬ ನಂಬಿಕೆಯಿಂದ. ಆದರೆ ಅವರನ್ನು ಒಳಗಡೆ ಬಿಡದೆ ಪೋಲೀಸಿನವರು ಅವರ ಮೇಲೆ ಅತ್ಯಾಚಾರವನ್ನು ಮಾಡಿದ್ದಾರೆ. ಕೇವಲ ಅವರ ಮೇಲೆ ಅಲ್ಲದೆ ಎಸ್.ಪಿ. ಯವರು ಪತ್ರಿಕಾ ವರದಿಗಾರರ ಮೇಲೂ ಕೈ ಮಾಡಿದ್ದಾರೆ. ಅಂದಮೇಲೆ ಪೋಲೀಸ್ ಪೇದೆಗಳು ಬಿಡುತ್ತಾರೆಯೇ ? ತಮ್ಮ ಸಂಕಷ್ಟವನ್ನು ಅರಿಕೆ ಮಾಡಿಕೊಳ್ಳಲು ಬಂದಿದ್ದ ಆ ದಲಿತ ಜನಾಂಗದವರನ್ನು ಹೊಡೆದು ಕರೆದುಕೊಂಡು ಹೋಗಿ ಜೈಲಿಗೆ ಹಾಕಿದ್ದಾರೆ.

ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಬಂಧನಕ್ಕೆ ಒಳಗಾಗಿರತಕ್ಕ ಜನರನ್ನು ಬಿಡುಗಡೆ ಮಾಡಿ, ಅವರಿಗೆ ಏನಾದರೂ ಗಾಯಗಳಾಗಿದ್ದರೆ ಚಿಕಿತ್ಸೆ ಮಾಡಿಸುವುದಲ್ಲದೆ ಅವರಿಗೆ ಪರಿಹಾರವನ್ನೂ ಕೂಡ ಕೊಡಬೇಕು. ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ದಲಿತ ಜನಾಂಗದ ಮೇಲೆ ನಡೆಸಿರತಕ್ಕ ಅತ್ಯಾಚಾರವನ್ನು ಸದನದ ಎಲ್ಲರೂ ಉಗ್ರವಾಗಿ ವಿರೋಧಿಸಬೇಕಾಗಿದೆ. ದಲಿತರ ಹೆಸರನ್ನು ಹೇಳಿಕೊಂಡು, ಬಡವರನ್ನು ಉದ್ಧಾರ ಮಾಡುತ್ತೇವೆಂದು ಘೋಷಣೆ ಮಾಡಿಕೊಂಡು ಅಧಿಕಾರಕ್ಕೆ ಬಂದಿರತಕ್ಕ ಸರ್ಕಾರ ಆ ಬಡ ಜನತೆಯನ್ನೇ ಹೊಡೆದಿದ್ದಾರೆ; ಹೆಣ್ಣುಮಕ್ಕಳನ್ನು ಬಲಿ ಹಾಕುತ್ತಿದ್ದಾರೆ. ಇದು ನಿಜವಾಗಿಯೂ ನಾವು, ನೀವೆಲ್ಲರೂ ತಲೆತಗ್ಗಿಸುವ ವಿಚಾರ. ಹೆಣ್ಣುಮಕ್ಕಳನ್ನು ಹೊಡೆದಿರತಕ್ಕ ಈ ಪೋಲೀಸರ ಶೌರ್ಯಕ್ಕೆ ಏನು ಹೇಳಬೇಕು ? ಹೆಣ್ಣುಮಕ್ಕಳನ್ನು ಗಂಡಸರು ಮುಟ್ಟಬಾರದೆಂದು ಮಹಿಳಾ ಪೋಲೀಸರನ್ನು ನೇಮಕ ಮಾಡಿಕೊಳ್ಳಲಾಗಿದೆ. ಆದರೂ ಗಂಡಸು ಪೋಲೀಸರು ಈ ಹೆಣ್ಣುಮಕ್ಕಳನ್ನು ಮುಟ್ಟಿ ಹೊಡೆದಿದ್ದಾರೆ, ಅಂದಮೇಲೆ ತಾವು ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಈ ಪೋಲೀಸರನ್ನು ಯಾವ ಹೆಸರಿನಿಂದ ಕರೆಯಬೇಕು. ಕೊಲೆ ಮಾಡಿರತಕ್ಕ ಜನರ ಮೇಲೆ ಹಿರಿನೇ ಕಟ್ಟಲೆಯನ್ನು ವಿಧಿಸಿ ಜೈಲಿಗೆ ಹಾಕಲಾಗಿದೆ. ಅವರನ್ನು ಯಾವ ಕಾರಣದಿಂದಲೂ ಹೊರಗಡೆ ಬಿಡಬಾರದು. ಅಂಥವರನ್ನು ಇವತ್ತು ಹೊರಗಡೆ ಬಿಟ್ಟಿದ್ದಾರೆ ಎಂದರೆ, ಇದರಲ್ಲಿ ಯಾವ ಅಧಿಕಾರಿಗಳ ಕೈವಾಡ ಇದೆ ಎಂಬುದನ್ನು ತಾವು ನೋಡಬೇಕು. ದಿ॥ ಶೇಷಗಿರಿಯಪ್ಪನವರ ಕೊಲೆಯ ಬಗ್ಗೆ ಸರ್ಕಾರಕ್ಕೆ ಏನಾದರೂ ಕಳಕಳಿ ಇದೆಯೇ ? ಎಂಬುದನ್ನು ನಾವು ಕೇಳಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಯವರು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಪೋಲೀಸರಲ್ಲಿ ಎಲ್ಲರೂ ಕೆಟ್ಟವರೇ ಇರುವುದಿಲ್ಲ. ಅವರಲ್ಲಿಯೂ ಬಹಳ ಮಂದಿ ಒಳ್ಳೆಯವರಿದ್ದಾರೆ. ಕೆಲವು ಕೆಟ್ಟ ಪೋಲೀಸರು ಉದ್ದೇಶ ಪೂರ್ವಕವಾಗಿ ಜನಗಳ ಮೇಲೆ ಹಲ್ಲೆ ಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಇತ್ತೀಚೆಗೆ ಬೆಳಗಾಂನಲ್ಲಿ ಮಾನ್ಯ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡಿ ಮನವಿ ಪತ್ರವನ್ನು ಕೊಡಬೇಕೆಂದು ಕೆಲವು ಹೆಣ್ಣುಮಕ್ಕಳು ಬಂದಿದ್ದರೆ ಈ ಪೋಲೀಸರು ಅವರ ಮೇಲೆ ಹಲ್ಲೆ ಮಾಡಿದ್ದಾರೆ.

ಮಾನ್ಯ ಅಧ್ಯಕ್ಷರೆ, ಇವತ್ತು ಏನಾಗಿದೆ ಎಂದರೆ, ವಿರೋಧ ಪಕ್ಷದವರು ಎಷ್ಟೇ ಮಾತನಾಡಿದರೂ, ಏನೇ ಆರೋಪ ಮಾಡಿದರೂ ನಮಗೆ ನಮ್ಮ ಸರ್ಕಾರದ ರಕ್ಷಣೆ ಇದೆ, ನಮಗೆ ಏನೂ ತೊಂದರೆಯಾಗುವುದಿಲ್ಲ ಎನ್ನುವ ಮನೋಭಾವನೆ ನಿಮ್ಮ ಅಧಿಕಾರಿಗಳಲ್ಲಿ, ಪೋಲೀಸ್ ಇಲಾಖೆಯಲ್ಲಿ ಬಂದಿದೆ. ಅಲ್ಲದೆ ಪೋಲೀಸ್‌ನವರನ್ನು ಎದುರು ಹಾಕಿಕೊಂಡರೆ ನಾವು ಸರ್ಕಾರವನ್ನು ನಡೆಸುವುದಕ್ಕೆ ಸಾಧ್ಯವಿಲ್ಲ ಎನ್ನುವ ಭಯ ನಿಮಗಿದೆ ಎಂದು ನನಗನ್ನಿಸುತ್ತದೆ.

ಅಧ್ಯಕ್ಷರು.—ಜನರಲ್ ಡಿಸ್ಕಷನ್ ಬಂದಾಗ ತಾವು ಇದನ್ನೆಲ್ಲಾ ಹೇಳುವಿರಂತೆ ಈಗ ಸಧ್ಯಕ್ಕೆ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಪಂಪಾಪತಿ.—ಇದು ಎಲ್ಲಕ್ಕಿಂತ ಮುಖ್ಯವಾದ ವಿಚಾರವಾಗಿರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಾವು ದಲಿತ ಜನಾಂಗದ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿರುವುದರಿಂದ ಅವರ ಹಿತವನ್ನು ರಕ್ಷಣೆ ಮಾಡತಕ್ಕದ್ದು ನಮ್ಮ ಆದ್ಯ ಕರ್ತವ್ಯ. ನಿನ್ನೆಯ ದಿವಸ ಅವರಮೇಲೆ ಪೋಲೀಸರು ಯಾರು ಕೈ ಮಾಡಿದ್ದಾರೆ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು.—ಈಗಾಗಲೇ ಸಾಕಷ್ಟು ಸಮಯವಾಗಿರುವುದರಿಂದ ಈ ನೋಟೀಸಿಗೆ ಸಹಿ ಹಾಕದಿರುವವರಿಗೆ ನಾನು ಮಾತನಾಡಲು ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ, ಇನ್ನೂ ಅನೇಕ ಘಟನೆಗಳು ಇದೇ ರೀತಿ ನಡೆಯುತ್ತವೆ. ಪೋಲೀಸರು ನಾಗರೀಕರ ಹಿತವನ್ನು ಕಾಪಾಡತಕ್ಕ ಜನ. ನಾಗರೀಕರಿಗೆ ನ್ಯಾಯವನ್ನು ದೊರಕಿಸಿ ಕೊಡಲು ಇವರು ಹೋರಾಡಬೇಕು. ಒಂದುವೇಳೆ ಇವರು ಹಾಗೆ ನಾಗರೀಕರ ಹಿತಕ್ಕಾಗಿ ಹೋರಾಟ ಮಾಡದಿದ್ದರೆ ನಾಗರೀಕರೇ ಇವರಿಗೆ ಸರಿಯಾದ ಬುದ್ಧಿಯನ್ನು ಕಲಿಸಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ನಾನು ಸರ್ಕಾರದವರನ್ನು ಕೇಳಿಕೊಳ್ಳುವುದಾದರೂ ಇಷ್ಟೆ. ನಿನ್ನೆಯ ದಿವಸದ ಘಟನೆಯಲ್ಲಿ ಯಾರ್ಯಾರು ಬಂಧಿಸಲ್ಪಟ್ಟಿದ್ದಾರೆ ಅವರನ್ನು ಬಿಡುಗಡೆ ಮಾಡಿ, ಏಟು ಬಿದ್ದಿರುವವರಿಗೆ ಚಿಕಿತ್ಸೆ ನೀಡಿ ಪರಿಹಾರವನ್ನು ಕೊಡಬೇಕು.

ಕುಮಾರಿ ಎಸ್. ಪ್ರಮಿಳಾ.—ಮಾನ್ಯ ಅಧ್ಯಕ್ಷರೆ, ನಾನು ನೋಟೀಸಿಗೆ ಸಹಿ ಹಾಕದಿದ್ದರೂ ಮಾತನಾಡಲು ನನಗೆ ಅವಕಾಶ ಕೊಡಬೇಕು. ಕಾರಣ ಪೋಲೀಸರು ಹೆಣ್ಣುಮಕ್ಕಳ ಮೇಲೆ ಕೈ ಮಾಡಿದ್ದಾರೆ.

(೩ ಜನ ಶಾಸಕಿಯರು ಒಟ್ಟಿಗೇ ನಿಂತು ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು.—ಸಹಿ ಹಾಕದೇ ಇರುವವರಿಗೆ ಮಾತನಾಡಲು ನಾನು ಅವಕಾಶ ಕೊಡುವುದ ಕ್ಕಾಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಇಲ್ಲಿ ೩ ಜನ ಶಾಸಕಿಯರಿದ್ದಾರೆ. ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ನಡೆದಿರುವುದರಿಂದ ಈ ಮೂವರಲ್ಲಿ ಯಾರಾದರೂ ಒಬ್ಬರು ಮಾತನಾಡಲು ಅವಕಾಶ ವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

† ಶ್ರೀಮತಿ ಸುಶೀಲಾ ಚಲುವರಾಜ್ (ಹೆಗ್ಗಡದೇವನ ಕೋಟೆ).—ಮಾನ್ಯ ಅಧ್ಯಕ್ಷರೆ, ನಿನ್ನೆ ನಡೆದಂಥ ಘಟನೆ ಹಿಂದೆ ಬ್ರಿಟೀಷರ ಕಾಲದಲ್ಲಿ ಜಲಿಯನ್‌ವಾಲಾಭಾಗ್‌ನಲ್ಲಿ ನಡೆದಂಥ ಘಟನೆ. ಆಗ ಅವರು ನಮ್ಮ ಹಿಂದೂಗಳನ್ನು ಕೊಂದರು. ಆದರೆ ಇವತ್ತು ನಮ್ಮ ಜನರೇ ನಮ್ಮನ್ನು ಕೊಲ್ಲುತ್ತಿ ದ್ದಾರೆ, ಹೊಡೆತ ಹೊಡೆಯುತ್ತಿದ್ದಾರೆ. ಇದನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ನಾಗರೀಕರ ರಕ್ಷಣೆ, ದಲಿತರ ರಕ್ಷಣೆ ಸರಿಯಾಗಿ ಆಗುತ್ತಿಲ್ಲವೆಂದು ಧಾರಾಳವಾಗಿ ಹೇಳಬಹುದು. ನಮ್ಮ ಹೆಣ್ಣುಮಕ್ಕಳನ್ನು ಪೋಲೀಸರು ನಿನ್ನೆಯ ದಿವಸ ಹೊಡೆದಿರುವುದನ್ನು ನೋಡಿದರೆ ಇದೊಂದು ರಾಕ್ಷಸೀ ಕೃತ್ಯವೆಂದು ಹೇಳ ಬಹುದು. ಪೋಲೀಸರು ಹೆಣ್ಣುಮಕ್ಕಳ ಮೈಮೇಲೆ ಕೈಮಾಡಿರುವುದನ್ನು ನೋಡಿದರೆ ನಿಜವಾಗಿಯೂ ನಾಚಿಕೆಯಿಂದ ನಾವೆಲ್ಲರೂ ತಲೆ ತಗ್ಗಿಸಬೇಕಾಗಿದೆ. ಹಿಂದಿನ ಕಾಲದಲ್ಲಿ ಯಾರಾದರೂ ಗಂಡಸರು ಹೆಂಗಸರ ಮೇಲೆ ಕೈ ಮಾಡಿದರೆ ಹೆಂಗಸರಿಗೆ ರಕ್ಷಣೆ ಕೊಡುತ್ತಿದ್ದರು. ಆದರೆ ಇವತ್ತು ಆ ರೀತಿ ಇಲ್ಲ. ನಿನ್ನೆಯ ದಿವಸ ಮಹಿಳೆಯ ಮೇಲೆ ಕೈಮಾಡಿದ್ದಲ್ಲದೆ, ಒಬ್ಬ ಪತ್ರಿಕಾ ವರದಿಗಾರರು ಈ ದೃಶ್ಯವನ್ನು ನೋಡಲು ಹೋದಾಗ ಅವರನ್ನೂ ಹೊಡೆದಿದ್ದಾರೆ. ನಾನು ಪತ್ರಿಕಾಕರ್ತ, ನನ್ನನ್ನು ಹೊಡೆಯಬೇಡಿ ಎಂದು ತನ್ನಲ್ಲಿದ್ದ ಗುರ್ತಿನ ಕಾರ್ಡನ್ನು ತೋರಿಸಿದರೂ ಬಿಟ್ಟಿಲ್ಲ. ನಿನ್ನೆಯ ಘಟನೆಯಲ್ಲಿ ನೊಂದ ವರಿಗೆ ಪರಿಹಾರವನ್ನು ಕೊಡಬೇಕೆಂದು ಎಲ್ಲ ಸದಸ್ಯರೂ ಹೇಳುತ್ತಿದ್ದಾರೆ. ಆದರೆ ಅದೇನೂ ದೊಡ್ಡದಲ್ಲ.

೩-೩೦ ಪಿ.ಎಂ.

ಸರ್ಕಾರದವರು ಕಾಂಪನ್‌ಸೇಷನ್ ದುಡ್ಡು ಕೊಡುತ್ತಾರೆ ಎನ್ನುವುದು ಅದು ದೊಡ್ಡ ವಿಷಯ ವಲ್ಲ, ಈ ರೀತಿಯ ಘಟನೆಗಳು ನಮ್ಮ ದೇಶದಲ್ಲಿ ಅದರಲ್ಲೂ ನಮ್ಮ ರಾಜ್ಯದಲ್ಲಿ ಏನಾಯಿತು ಅದು ಆಗ ಬಾರದು, ಆದ್ದರಿಂದ ಇದಕ್ಕೆ ಸಂಬಂಧಪಟ್ಟವರು ಯಾರೇ ಇರಲಿ ಅವರ ಮೇಲೆ ತೀವ್ರತರವಾದ ಕ್ರಮ ತೆಗೆದುಕೊಳ್ಳಬೇಕು.

† ಶ್ರೀ ಆರ್. ಗುಂಡುರಾವ್ (ಮಾನ್ಯ ಮುಖ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧಪಕ್ಷ ಉಪನಾಯಕರಾದಂತಹ ಶ್ರೀಮಾನ್ಯ ಬಸವಲಿಂಗಪ್ಪನವರು ಇನ್ನಿತರ ಅನೇಕ ಸ್ನೇಹಿತರು ಎಲ್ಲರೂ ನಿನ್ನೆ ನಡೆದಂತಹ ಘಟನೆಯ ಬಗ್ಗೆ ತೀವ್ರತರವಾದ ಬಹಳ ಕಳಕಳಿಯನ್ನು ವ್ಯಕ್ತಮಾಡಿದ್ದಾರೆ. ಅದರಲ್ಲಿ ಶ್ರೀಮಾನ್ ಲಕ್ಷ್ಮಿಸಾಗರ್ ಮಾತನಾಡುತ್ತಾ ಸ್ವಲ್ಪ ಹಿಂದಿನ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಮಾನ್ಯ ಶೇಷಗಿರಿಯಪ್ಪನ ಕೊಲೆ ಪ್ರಕರಣದಲ್ಲಿ ಜಮೀನು ಮೇಲೆ ಬಂದಂತ ವಿಷಯಕ್ಕೆ ಸುಮಾರು ಒಂದು ವರ್ಷದಿಂದ ಅವರು ಅರ್ಜಿ ಕೊಡುತ್ತಾ ಇದ್ದರೂ ಯಾವ ಕಾರ್ಯಕ್ರಮ ಕೈಕೊಳ್ಳದೆ ಈ ಕೊಲೆ ಆಯಿತು ಮತ್ತು ಸೂಕ್ತವಾದ ರಕ್ಷಣೆ ಕೊಟ್ಟಿದ್ದರೆ ಈ ತರಹ ಕೊಲೆಯಾಗುತ್ತಾ ಇರಲಿಲ್ಲ ಎಂದು ಇನ್ನು ಬಹಳ ಜನ ಸದಸ್ಯರು ಹಾಗೂ ಸನ್ಮಾನ್ಯ ದೇವೇಗೌಡರು ಇದರ ಬಗ್ಗೆ ಅಷ್ಟೇನು ಮಾತನಾಡಲಿಲ್ಲ ಬೇರೆ ಒಂದು ವಿಷಯದ ಬಗ್ಗೆ ಒಂದೆರಡು ಮಾತನಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಕೊಲೆ ವಿಷಯದಲ್ಲಿ ಮಾತನಾಡಲಿಕ್ಕೆ ಒಂದು ಏನಾಗಿದೆ ಎಂದರೆ ಪ್ರತಿದಿವಸವೂ ಕೊಲೆ ನಡೆಯುತ್ತಾ ಇರುವುದನ್ನು ನೋಡುತ್ತಲೇ ಇದ್ದೇವೆ.

ಶ್ರೀ ಆರ್. ಗುಂಡುರಾವ್.—ಏತಕ್ಕೋಸ್ಕರ ಈ ವಿಷಯ ತೆಗೆದುಕೊಂಡೆನೆಂದರೆ ನನಗೆ ತಿಳಿದ ಪ್ರಕಾರ ಜನ ಅವರು ಏನು ಬಂದಿದ್ದರು, ಅವರು ಮನವಿ ಕೊಡುವುದಕ್ಕೆಂದು ಆ ಸಂದರ್ಭದಲ್ಲಿ ಪೋಲೀಸರು ಲಾಠಿ ಚಾರ್ಜ್ ಮಾಡಿದ್ದಾರೆಂದು ಕೆಲವರು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದ ಗಮನ ವನ್ನು ಸೆಳೆಯಬೇಕೆಂದು ಎಲ್ಲಿಂದ ಪಾದಯಾತ್ರೆ ಮಾಡಿಕೊಂಡು ಬಂದರು, ಮೂರು ದಿವಸಗಳ ಕಾಲ ಹೊಸಕೋಟೆ ಹಾಗೂ ಕೆ.ಆರ್. ಪುರಂ ಮತ್ತು ಮುಂತಾದ ಕಡೆಗಳಲ್ಲ ಸ್ಟೇಮಾಡಿ ..ಅವರು ಊಟವನ್ನು ತೆಗೆದುಕೊಳ್ಳದೆ ಬಂದಿದ್ದರು ಎನ್ನುವುದು ನಮ್ಮ ಈಗಿನ ಪ್ರಶ್ನೆಯಲ್ಲ. ನನಗೆ ಮನವಿ ಸಲ್ಲಿಸುವುದ ಕ್ಕೋಸ್ಕರವೆಂದು ಪೋಲೀಸರು ಬಂದು ಹೇಳಿದರು, ನಿಮ್ಮನ್ನು ನೋಡಲು ಕಾತುರರಾಗಿದ್ದಾರೆ ಆದ್ದರಿಂದ ತಾವು ಒಂದು ಸಮಯವನ್ನು ಕೊಡಬೇಕೆಂದು ಕೇಳಿದರು ನಾನು ಅದಕ್ಕೆ ೧೨ ರಿಂದ ೧ ಗಂಟೆ ಯವರೆಗೆ ನಾನು ಆಫೀಸಿನಲ್ಲಿ ಇರುತ್ತೇನೆ ಎಂದು ಹೇಳಿದೆ. ಅವರ ಪೈಕಿ ಒಂದು ೫–೫ ಜನ ಭೇಟಿ ಮಾಡುವುದರಲ್ಲಿ ನನ್ನದು ಯಾವುದೇ ತರಹ ವಿರೋಧವಿಲ್ಲ ಎಂದು ಹೇಳಿದೆ. ಅದೇ ಪ್ರಕಾರ ನನ್ನ ಟೈಮ್ ಫಿಕ್ಸ್ ಆಗಿತ್ತು ಪೋಲೀಸ್ ಅಧಿಕಾರಿಗಳು ಅಲಸೂರು ಮುಖಾಂತರ ನಡೆದುಕೊಂಡು ಬರುತ್ತಾ ಇದ್ದಾರೆ ಇವರು ಹೋಗಿ ತಿಳಿಸಿದ್ದಾರೆ, ನೀವು ಬರುವುದಾದರೆ ನಾವು ಕರೆದುಕೊಂಡು ಹೋಗುತ್ತೇವೆ ನೀವು ಬರಬಹುದು ಎಂದು ಹೇಳಿದರು. ಅದಕ್ಕೆ ಅವರು ನಾವು ತಿಳಿಸುತ್ತೇವೆ ಮುಂದೆ ಹರಿಜನರ ಹಾಸ್ಟಲ್ ಇದೆ ಅಲ್ಲಿ ಹೋಗಿ ಸ್ನಾನ, ಊಟಮಾಡಿ ತಿಳಿಸುತ್ತಾರೆಂದು ನನಗೆ ತಿಳಿಸಿದರು. ಪೋಲೀಸರೆಂದರೆ ಉನ್ನತ ಅಧಿಕಾರಿಗಳು ಸುಮಾರು ೧೨ ಗಂಟೆ ಆಗುತ್ತಾಬರುತ್ತಾ ಇದೆ ನಮಗೆ ಮೆಸೇಜ್ ಕಳುಹಿಸು ತ್ತಾರೆಂದು ನಾನು ನನ್ನ ಚೇಂಬರ್‌ನಲ್ಲಿ ಕಾದು ಕುಳಿತೆ, ಮತ್ತೆ ಬೇರೆಯವರನ್ನು ಭೇಟಿ ಮಾಡುತ್ತಿದ್ದೆ. ಆಮೇಲೆ ಪೋಲೀಸ್ ಅಧಿಕಾರಿಗಳು ಬಂದರು ಅವರು ತಮ್ಮನ್ನು ನೋಡಲಿಕ್ಕೆ ಬರುವುದಿಲ್ಲ ಮತ್ತು ನಾವು ಕೊಟ್ಟ ಸಮಯಕ್ಕೆ ನೀವು ನೋಡಬೇಕೆಂದು ಹೇಳಿದ್ದಾರೆಂದು ಹೇಳಿದರು, ಅದಕ್ಕೆ ನಾನು ಆಗಬಹುದು ಅವರು ಕೊಟ್ಟ ಸಮಯಕ್ಕೆ ನಾವು ನೋಡೋಣ ೬ ಗಂಟೆಯವರೆಗೆ ವಿಧಾನಸಭೆಯಲ್ಲಿ ಇರುತ್ತೇನೆ ಎಲ್ಲಾ ಮುಗಿದಮೇಲೆ ಸಮಯ ಅನುಕೂಲವಾದಾಗ ನೋಡುತ್ತೇನೆಂದು ಹೇಳಿದೆ. ಏತಕ್ಕೆ ತಮಗೆ ಈ ವಿಷಯ ವನ್ನು ಹೇಳುತ್ತಾ ಇದ್ದೇನೆಂದರೆ ಅವರು ಬಂದ ಉದ್ದೇಶ ಏನು ಎಂಬುದು ಮುಖ್ಯ, ನನ್ನನ್ನು ಕಾಣ ಬೇಕೆಂದು ಬಂದರು. ಆದರೆ ಕಬ್ಬನ್ ಪಾರ್ಕಿನಲ್ಲಿ ಮೀಟಿಂಗ್ ಮಾಡಿದರು. ಅವರಿಗೆ ಸಾರ್ವಜನಿಕ ವಾಗಿ ಸಭೆ ಮಾಡಬೇಕೆನ್ನುವುದು ಅವರ ಉದ್ದೇಶವಲ್ಲ, ಸರ್ಕಾರಕ್ಕೆ ಮನವಿ ಸಲ್ಲಿಸಿ ಅವರಿಗೆ ಆಗಿರುವ ಅನ್ಯಾಯವನ್ನು ತಿಳಿಸಬೇಕೆಂದು ಬಂದಿದ್ದರು. They stayed in K. R. PURAM. Hoskote and they have not taken any food. Or, they may have taken food. Anyway, that is not the matter before me. They are very sincere. But there are some elements, who provoked them. "Why should you meet the Chief Minister ? If at all the Chief Minister is intersted, he can come to Cubbon Park and meet them. We will see that he comes to Cubbon Park." I do not think, any Government or any Chief Minister will do like that. It is not the question of R Gundu Rao or C. M. Armugaum, Devegowda or Basavaligappa in the Seat. It is the question of the office, it is the question of honour and dignity of the office of Chief Minister to be maintained. What is the purpose of their Padayathra ?

ಶ್ರೀ ಬಿ. ಬಸವಲಿಂಗಪ್ಪ.—ಆ ವಿಷಯವನ್ನು ನಿಮಗೆ ಯಾರು ಹೇಳಿದರು ?

ಶ್ರೀ ಆರ್. ಗುಂಡೂರಾವ್. ಯಾವಾಗ ಅವರು ಬರಲಿಲ್ಲ, ಅದಕ್ಕೆ ನಮಗೆ ಆಧಾರ ಬೇರೆ ಏನಿದೆ ? ಪಾಪ ಅವರು ೫೦ ಮೈಲಿ ದೂರ ನಡೆದುಕೊಂಡು ಬಂದು ನನಗೆ ಮನವಿಯನ್ನು ಕೊಡುವು ದಕ್ಕೆ ಟೈಮ್ ಫಿಕ್ಸ್ ಮಾಡಿಕೊಂಡು ಅವರು ಬಾರದೇ ಹೋದರೆ ಏನು ಅರ್ಥ ? ಅದಕ್ಕೆ ಆಧಾರವನ್ನು ಹುಡುಕುವುದಕ್ಕೆ ಆಗುವುದಿಲ್ಲ. It it not in the party interest or in politica interest. ೧೫೦ ಜನಗಳಿಗೆ ಲಾಠಿ ಛಾರ್ಜ್ ಮಾಡಿದರೆ ಪೋಲೀಸರಿಗೆ ಒಳ್ಳೆಯ ಹೆಸರು ಬರುತ್ತದೆಯೇ ? ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆಯೇ ? ಆ ರೀತಿ ಯಾರೂ ತಿಳಿದುಕೊಂಡಿಲ್ಲ. ಅವರಲ್ಲಿ ೫ ಜನ ನನ್ನ ಹತ್ತಿರ ಬರಬಹುದಾಗಿತ್ತು. ಈ ತರಹ ಅನ್ಯಾಯವಾಗಿದೆ ಎಂದು ಹೇಳಿದ್ದರೆ ಅವರನ್ನು ಯಾರು ಪ್ರಶ್ನೆ ಮಾಡುತ್ತಾ ಇರಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಆ ಪ್ರದರ್ಶನಕಾರರನ್ನು ಪೋಲೀಸಿನವರು ನಡೆಸಿಕೊಂಡು ಬಂದು ನಿಮಗೆ ಏನುಬೇಕೋ ಕೇಳಿ ಎಂದು ಅವರನ್ನು ಕೇಳಬಹುದಾಗಿತ್ತು.

SRI R. GUNDU RAO.—Don't mix up the issue. If you mix it up, the seriousness of the issue and everything will go.

ಈಗ ಮೊನ್ನೆ ದಿವಸ ಬೆಂಗಳೂರಿಗೆ ೫ ಸಾವಿರ ಜನಗಳ ಕಾರ್ಮಿಕರ ರ್‍ಯಾಲಿ ನಡೆಯಿತು. ಶ್ರೀಮಾನ್ ಕಕ್ಕಿಲಾಯ ಅವರು ಮತ್ತು ಶ್ರೀಮಾನ್ ಮೈಖೆಲ್ ಫರ್ನಾಂಡಿಸ್ ಅವರು ಕಾರ್ಮಿಕರ ಒಂದ ದೊಡ್ಡ ಪ್ರೊಸಿಷನ್ ಕರೆದುಕೊಂಡು ಬಂದು ಅದರ ಒಂದು ದೊಡ್ಡ ಸಭೆ ಕಬ್ಬನ್ ಪಾರ್ಕಿನಲ್ಲಿ ನಡೆಯಿತು. ಅವರಿಗೆ ನಮ್ಮ ಪೋಲೀಸಿನವರು ಲಾಠಿಛಾರ್ಜ್ ಮಾಡಲಿಲ್ಲ. ಪ್ರೊಹಿಬಿಟರಿ ಆರ್ಡರ್ ಇದೆ, ಆದ್ದರಿಂದ ಕಾರ್ಮಿಕರು ವಿಧಾನ ಸೌಧದ ಅವರಣದಲ್ಲಿ ಬರಕೂಡದು ಎಂದು ಪೋಲೀಸ್ ಅಧಿಕಾರಿಗಳು ಅವರಿಗೆ ತಿಳಿಸಿದರು. ಆದ್ದರಿಂದ ಅವರು ಬರಲಿಲ್ಲ. ಆ ಮೇಲೆ ಅವರಲ್ಲಿ ೫-೬ ಜನ ಲೀಡರುಗಳು ಬರುತ್ತೇವೆ ಮನವಿ ಅರ್ಪಿಸುತ್ತೇವೆ ಎಂದು ಹೇಳಿ ನನ್ನ ಹತ್ತಿರ ಬಂದು ಅಪಾಯಿಂಟ್ ಮೆಂಟ್ ಫಿಕ್ಸ್ ಮಾಡಿ ಟೈಮ್ ಕೊಡಿ ಎಂದು ನನ್ನನ್ನು ಕೇಳಿದರು. ಆಗ ನಾನು ಅವರಿಗೆ ೩ ಗಂಟೆಗೆ ನೀವು ನನ್ನನ್ನು ನೋಡಬಹುದು ಎಂದು ಹೇಳಿದ್ದೆ. ಅವರೇನೂ ೧೫೦ ಜನ ಅಲ್ಲ, ಸಾವಿರಾರು ಜನರು ಬರಲಿಲ್ಲ, ೩ ಜನ ಕಾರ್ಮಿಕ ಮುಖಂಡರು ಬಂದಿದ್ದರು, ಆ ದಿವಸ ಮೂರು ಗಂಟೆಯಲ್ಲಿ ನಾನು ಅಸೆಂಬ್ಲಿಯಲ್ಲಿ ಇದ್ದೆ. ಆಗ ನನ್ನನ್ನು ಮಾನ್ಯ ಸದಸ್ಯರಾದ ಕಕ್ಕಿಲ್ಲಾಯ ಮತ್ತು ಶ್ರೀಮಾನ್ ಮೈಖೆಲ್ ಫರ್ನಾಂಡಿಸ್ ಕೇಳಿದರು. ಆಗ ನಾನು ಅವರಿಗೆ ಹೇಳಿದೆ ಒಂದು ಗಂಟೆ ತಡೆದು ಬನ್ನಿ ಎಂದು ಹೇಳಿದೆ. ಅವರು ೫ ಗಂಟೆಗೆ ಲೌಂಜ್‌ನಲ್ಲಿ ಬಂದು ನನಗೆ ಮನವಿಯನ್ನು ಕೊಟ್ಟರು. ಅವರು ತಮ್ಮ ಮನವಿಯಲ್ಲಿ ಕಾರ್ಮಿಕರ ಮೇಲೆ ಮಾಲೀಕರ ದೌರ್ಜನ್ಯ ಜಾಸ್ತಿಯಾಗಿದೆ ಎಂದು ಹೇಳಿದರು, ಮತ್ತೆ, ಕೆಲವಾರು ಅಗತ್ಯವಸ್ತುಗಳ ಬೆಲೆ ಜಾಸ್ತಿಯಾಗಿದೆ, ಪೆಟ್ರೋಲ್ ಬೆಲೆ ಜಾಸ್ತಿಯಾಗಿದೆ, ಎಂದು ಹೇಳಿ ಮನವಿ ಕೊಟ್ಟು ಹೋದರು. ಅವರಿಗೆ ಏನಾಯಿತು ? ಅದರಲ್ಲಿ ಅವರ ಗೌರವ ಘನತೆ ಕಡಿಮೆಯಾಗಲಿಲ್ಲ. ಅವರೂ ಸಹ ನಾವು ೫ ಸಾವಿರ ಜನರಿದ್ದೇವೆ, ೧೦ ಸಾವಿರ ಜನರಿದ್ದೇವೆ ಮುಖ್ಯ ಮಂತ್ರಿಗಳೇ ಕಬ್ಬನ್ ಪಾರ್ಕಿಗೆ ಬರಲಿ ಎಂದು ಹೇಳಬಹುದಾಗಿತ್ತು. ಅದರೆ ಅವರು ಆ ರೀತಿ ಹೇಳಲಿಲ್ಲ. ಅವರೇ ಬಂದರು, ಎಂದರೆ ಅವರ ಮುಖಂಡರುಗಳು ಬಂದರು. ಇದೇರೀತಿ ಆ ಹುಣಸೇಕೋಟೆಯಿಂದ ಬಂದಂತಹ ಜನಗಳಿಗೆ ಅವರು ಪ್ರೊಸಿಷನ್ ಬರಬೇಕಾದರೆ ಅವರಿಗೆ ಮುಖ್ಯಮಂತ್ರಿಗಳಿಗೆ ಬಂದು ಮನವಿಯನ್ನು ಅರ್ಪಿಸಬೇಕು ಎನ್ನುವ ಮನಸ್ಸು ಇತ್ತು. ಅದರಲ್ಲಿ ಕೆಲವರು ಹಾಸ್ಟಲಿಗೆ ಹೋದ ಮೇಲೆ ಬರುತ್ತೇವೆ ಎಂದು ಹೇಳಿದರು. ಅವರು ನನ್ನನ್ನು ೧೨ ಗಂಟೆಗೆ ಬಂದು ಕಾಣಬಹುದಾಗಿತ್ತು, ೨ ಗಂಟೆಗೆ ಬಂದು ನೋಡಬಹುದಾಗಿತ್ತು. ಅಥವಾ ಮೂರು ಗಂಟೆಗೆ ಬಂದು ನೋಡಬಹುದಾಗಿತ್ತು. ನಾನು ರೆಡಿಯಾಗಿದ್ದೆ. ಆದರೆ ಅವರು ನನ್ನನ್ನು ಮೀಟ್ ಮಾಡುವುದಕ್ಕೆ ಬರಲಿಲ್ಲ. ಅಧ್ಯಕ್ಷರನ್ನು ನೋಡಬೇಕು ಎಂದು ಇದ್ದರು. ಆದರೆ ಅವರನ್ನೂ ನೋಡಲಿಲ್ಲ. ಅಧ್ಯಕ್ಷರು ಆರ್ಧ ಗಂಟೆ ಮುಕ್ಕಾಲು ಗಂಟೆ ಕಾದರೂ ಸಹ ಅವರು ಅಧ್ಯಕ್ಷರನ್ನು ನೋಡುವುದಕೆ ಬರಲಿಲ್ಲ. ಆ ಮೇಲೆ ಎಷ್ಟು ಹೊತ್ತು ಕಾಯುವುದು ಎಂದು ಹೇಳಿ ಅಧ್ಯಕ್ಷರು ವಾಪಸ್ಸು ಹೋದರು. ಅವರು ಮೇಲ್ಮಟ್ಟದ ಅಧಿಕಾರಿಗಳಿಗಾಗಲೀ, ಈ ಸಭೆಯ ಅಧ್ಯಕ್ಷರಿಗಾಗಲೀ, ಮುಖ್ಯ ಮಂತ್ರಿಗಳಿಗಾಗಲೀ ಅವರು ಮನವಿಯನ್ನು ಕೊಡುವುದಕ್ಕೆ ಬರಲಿಲ್ಲ. ಅದು ಬಿಡಿ. ಅದು ನಮಗೆ ಸಂಬಂಧಪಟ್ಟ ಪ್ರಶ್ನೆಯಲ್ಲ. ಈಗ ನಾವು ನಾವು ದೆಹಲಿಗೆ ಒಂದು ಡಿಲಿಗೇಷನ್ ಹೋಗುತ್ತೇವೆ ಎಂದು ಇಟ್ಟುಕೊಳ್ಳೋಣ. ನಾವು ಪ್ರಧಾನ ಮಂತ್ರಿಗಳನ್ನು ಬೇಟಿ ಮಾಡಿ ಯಾವುದೋ ಒಂದು ರೈಲ್ವೆ ಲೈನ್ ಹಾಕಬೇಕೆಂದು ಒತ್ತಾಯ ಮಾಡುವುದಕ್ಕೆ ಹೋಗುತ್ತೇವೆ ಎಂದು ಇಟ್ಟುಕೊಳ್ಳೋಣ. ಅವರನ್ನು ಭೇಟಿ ಮಾಡುವುದಕ್ಕೆ ಯಾವುದೋ ಟೈಮ್ ಗೊತ್ತು ಮಾಡಿಕೊಂಡಿರುತ್ತೇವೆ. ಅವರು ಪಾರ್ಲಿಮೆಂಟ್‌ನಲ್ಲಿ ಬಹಳ ಬಿಸಿ ಇರುತ್ತಾರೆ. ಅವರನ್ನು ನಾವು ಗೊತ್ತು ಮಾಡಿಕೊಂಡಿರತಕ್ಕ ವೇಳೆಯಲ್ಲಿ ಭೇಟಿ ಮಾಡುವುದಕ್ಕೆ ಸಾಧ್ಯವಾಗದಿದ್ದರೆ ಎರಡು ದಿವಸ ಕಾಯಬೇಕಾಗುತ್ತದೆ. ಹಾಗೆಯೇ ಈ ಜಾಥಾದಲ್ಲಿ ಬಂದಿದ್ದಂತಹ ೫ ಜನರು ಅಧ್ಯಕ್ಷರನ್ನು ಭೇಟಿ ಮಾಡಲು ಏನು ಬಂದಿದ್ದರು ಅವರು ಅರ್ಧ ಮುಕ್ಕಾಲು ಗಂಟೆ ಕಾಯಬೇಕಾಗಿತ್ತು. ಮತ್ತು ಅವರು ಮುಖ್ಯ ಮಂತ್ರಿಗಳನ್ನು ಎಂದರೆ ನನ್ನನ್ನು ಭೇಟಿ ಮಾಡಿ ಮನವಿಯನ್ನು ಕೊಟ್ಟು ಹೋಗಿದ್ದರೆ ಯಾವ ಸಮಸ್ಯೆಯೂ ಬರುತ್ತಾ ಇರಲಿಲ್ಲ. ಮತ್ತು ಅವರಿಗೇನೂ ನಷ್ಟವಾಗುತ್ತಿರಲಿಲ್ಲ. ಅದರೆ ಅವರು ಕಬ್ಬನ್ ಪಾರ್ಕಿಗೆ ಹೋಗಿ ಸಭೆ ನಡೆಸಿದ ಮೇಲೆ ಆವರ ಜೊತೆಯಲ್ಲಿ ಹೋದ ಕೆಲವು ನಾಯಕರು ಸೇರಿಕೊಂಡು ಮುಖ್ಯ

ಮಂತ್ರಿಗಳನ್ನು ಭೇಟಿ ಮಾಡುವುದು ಬಿಟ್ಟು ಹೋಯಿತು. ಮನವಿ ಕೊಡುವುದು ಬಿಟ್ಟು ಹೋಯಿತು. ಅವರು ಸರ್ಕಾರವನ್ನು ಮತ್ತು ಮುಖ್ಯ ಮಂತ್ರಿಗಳನ್ನು ಟೀಕೆ ಮಾಡಿದರು. ಅಧ್ಯಕ್ಷರನ್ನು ಭೇಟಿ ಮಾಡುವುದು ಬಿಟ್ಟು ಹೋಯಿತು. Every citizen of this country is free to criticize the Government in whatever language he wants. Whether the people appreciate it or not, anybody can criticize. That liberty has been given in the Constitution. ಆದರೆ ಇಂಡಿವಿಜುಯಲ್ ಆಗಿ ಯಾರಾದರೂ ಒಬ್ಬರನ್ನು ಟೀಕೆ ಮಾಡುವುದು ತಪ್ಪು. ಆ ರೀತಿ ಇಂಡಿವಿಜುಯಲ್ ಆಗಿ ಟೀಕೆ ಮಾಡಿದರೆ ಡಿಫರ್ಮೇಷನ್ ಕೇಸ್ ಹಾಕಬಹುದು. ಅದು ಬೇರೆ ಪ್ರಶ್ನೆ ಇರಲಿ. ಮುಖ್ಯ ಮಂತ್ರಿಗಳನ್ನು ಭೇಟಿ ಮಾಡುವುದಕ್ಕೆ ಬಂದವರನ್ನು ಕೆಲವರು ಇಲ್ಲಿ ಉಪಯೋಗಿಸಿಕೊಂಡಿದ್ದು ತಪ್ಪಾಯಿತು. ಇವರಿಗೆ ಹುಣಸೆ ಕೋಟೆ ಶೇಷಗಿರಿಯಪ್ಪನನ್ನು ಕೊಲೆ ಮಾಡಿದ್ದು ಬೇಜಾರು ಇಲ್ಲ. ಅವರ ಹೆಸರನ್ನು ಉಪಯೋಗಿಸಿಕೊಂಡು ಸರ್ಕಾರವನ್ನು ಬೈಯ್ದರು. ಬೈಯ್ಯಲಿ. ಈಗ ಕಾರ್ಮಿಕರು ಸರ್ಕಾರವನ್ನು ಟೀಕೆ ಮಾಡುತ್ತಾರೆ. ಆದರೆ ಅವರು ಮನವಿಯನ್ನು ಕೊಡಬೇಕಾದರೆ ಎಂ.ಎಲ್.ಎ ಗಳೋ ಅಥವಾ ಎಂ.ಎಲ್.ಸಿ ಗಳೋ ಅವರ ಲೀಡರನ್ನು ಕರೆದುಕೊಂಡು ಬಂದು ಮನವಿ ಕೊಟ್ಟುಹೋದರು. There are lot of forums to criticize the Government. You are free to criticize the Government inside the House or outside the House on any occasion and any forum. You are free to criticize the Officers, Ministers and the Chief Minister. ಆದರೆ ಅವರು ಮುಖ್ಯ ಮಂತ್ರಿಗಳಿಗೆ ಏನು ಮನವಿಯನ್ನು ಕೊಡಬೇಕು ಎಂದಿದ್ದರೋ ಅದು ಅವರಿಗೆ ಸೇರಬೇಕು. ಮುಖ್ಯ ಮಂತ್ರಿಗಳು ಮುಖ್ಯ ಮಂತ್ರಿಗಳೇ. ಸರ್ಕಾರ ಸರ್ಕಾರವೇ ? ಮುಖ್ಯ ಮಂತ್ರಿಗಳಿಗೆ ಸರ್ಕಾರವನ್ನು ನಡೆಸುವುದಕ್ಕೆ ರಾಜ್ಯಾಂಗಬದ್ಧವಾಗಿ ಎಲ್ಲಿಯವರೆಗೆ ಹಕ್ಕು ಇರುತ್ತದೆಯೋ ಅಲ್ಲಿಯವರೆಗೆ ಅವರು ಸರ್ಕಾರವನ್ನು ನಡೆಸಬಹುದು. ಅದಕ್ಕೆ ಪ್ರಜೆಗಳು ಅಧಿಕಾರವನ್ನು ಕೊಟ್ಟಿರುತ್ತಾರೆ. ಮುಖ್ಯ ಮಂತ್ರಿಗಳು ಕಾನೂನು ಬದ್ಧವಾಗಿ ಸರ್ಕಾರವನ್ನು ನಡೆಸುತ್ತಾರೆ. ನಾವು ನಮ್ಮ ಕೆಲಸವನ್ನು ನಿರ್ಭೀತಿಯಿಂದ ನಿರ್ಭಯವಾಗಿ ಕೆಲಸ ಮಾಡಬೇಕಾಗುತ್ತದೆ.

ಸರ್ಕಾರ ಏನು ಮಾಡುತ್ತದೆಂದು ಹೇಳುವ ಪ್ರಶ್ನೆಯಲ್ಲ. ನಾನು ಪಾಠ ಕಲಿಸಿದಂಥವನು, ನನ್ನ ಶಿಷ್ಯ ಈಗ ಅವನು ಡಿಡಿಪಿಐ ಆಗಿದ್ದಾನೆ ಎಂದರೆ ನಾನು ಏನು ಮಾಡಲಿಕ್ಕೆ ಆಗುತ್ತದೆ ? ಇದರಲ್ಲಿ ತಪ್ಪು ಏನು ? ಹಾಗೆಯೇ ಯಾರಾದರೂ ಸಹ ಮನವಿಯನ್ನು ಕೊಡಬೇಕಾದರೂ ಸಹ ಸಂಬಂಧಪಟ್ಟವರ ಹತ್ತಿರ ಹೋಗಬೇಕು. ದಲಿತರ ಹೆಸರಿನಲ್ಲಿ ರಾಜಕೀಯ, ದೇವರ ಹೆಸರಿನಲ್ಲಿ ರಾಜಕೀಯ, ಜಾತಿಯ ಹೆಸರಿನಲ್ಲಿ ರಾಜಕೀಯ. ಹೀಗೆ ರಾಜಕೀಯ ಮಾಡಿಕೊಂಡು ಹೋಗುತ್ತಾರೆ. ಆದರೆ ಇಲ್ಲಿ ಅಂಥ ರಾಜಕೀಯ ಮಾಡಲಿಕ್ಕೆ ಬರುವುದಿಲ್ಲ. ಅವರೇನೋ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಇಲ್ಲಿಗೆ ಬಂದರು; ಇಲ್ಲಿ ಪ್ರಾಹಿಬಿಟರಿ ಆರ್ಡರ್ಸ್ ಇರುವುದು ಅವರಿಗೆ ಗೊತ್ತಿಲ್ಲವೇ, ಆದರೆ ಅವರನ್ನು ಪ್ರಚೋದನೆ ಮಾಡಿ ಗಲಾಟೆ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಸುಮಾರು ೧೫೦ ಜನರು ವಿಧಾನ ಸಭೆಯ ಅಧ್ಯಕ್ಷರನ್ನು ಭೇಟಿ ಮಾಡಬೇಕು ಎಂದು ಹೇಳಿದರೆ ಅದು ಹೇಗೆ ಸಾಧ್ಯ ? ಅದಕ್ಕೆ ಪೋಲೀಸ್ ಅಧಿಕಾರಿಗಳು ಹೇಳಿದರು ವಿಧಾನಸೌಧದ ಸುತ್ತಮುತ್ತ ಪ್ರಾಹಿಬಿಟರಿ ಆರ್ಡರ್ ಇದೆ ನಾಲ್ಕೈದು ಜನರು ಮಾತ್ರ ಹೋಗಿ ಅವರನ್ನು ನೋಡಬಹುದು ಎಂದು. ಪೋಲೀಸರು ಹೇಳಿದ್ದನ್ನು ಕೇಳದೆ, ಅವರೇನು ಮಾಡುತ್ತಾರೆ ನೋಡೋಣ ಎಂದು ಕಾನೂನನ್ನು ಕೈಗೆ ತೆಗೆದುಕೊಂಡರು ಅದರ ಪರಿಣಾಮ ಹೀಗೆ ಆಯಿತು. ಇಂಥಾದ್ದರಲ್ಲಿ ಗಲಾಟೆ ಮಾಡಿದವರು ಸಿಕ್ಕಿಹಾಕಿಕೊಳ್ಳುವುದಿಲ್ಲ, ಪಾಪ ಸಿಕ್ಕಿಹಾಕಿಕೊಳ್ಳುವವರು ಬೇರೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ತಮ್ಮ ಮೊದಲಿನ ಅನುಭವ ಅದು.

ಶ್ರೀ ಆರ್. ಗುಂಡೂರಾವ್.—ತಮಗೂ ಅದರ ಅನುಭವ ಇದೆ. ಪೋಲೀಸರು ಹೇಳಿದರೂ ಸಹ ಇವರು ವಿಧಾನಸೌಧಕ್ಕೆ ನುಗ್ಗಲು ಪ್ರಯತ್ನ ಪಟ್ಟರು. ಈ ರೀತಿಯಲ್ಲಿ ನುಗ್ಗುವಾಗ ಪೋಲೀಸರಿಗೂ ಇವರಿಗೂ ಘರ್ಷಣೆಯಾಯಿತು. ಘರ್ಷಣೆಯಾದಾಗ ಪೋಲೀಸರು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದು ಸ್ವಾಭಾವಿಕ. ಆ ಸಂದರ್ಭದಲ್ಲಿ ಯಾರೇ ಹೋದರೂ ಸಹ ಅವರ ಮೇಲೂ ಲಾಠಿ

ಚಾರ್ಜ್ ಮಾಡುತ್ತಾರೆ. ೧೫೦ ಜನರು ಪ್ರಚೋದನೆ ಗೊಂಡಾಗ ಲಾಠಿ ಚಾರ್ಜ್ ಮಾಡದೆ ವಿಧಿಯಿರಲಿಲ್ಲ, ಆ ಸಂದರ್ಭದಲ್ಲಿ ಮಾನ್ಯ ಇಂಥವರ ಅವರೂ ಸಿಕ್ಕಿಕೊಂಡಿರಬೇಕು. ಇದನ್ನು ಮಾನ್ಯ ಸದಸ್ಯರುಗಳು ಅರ್ಥಮಾಡಿಕೊಳ್ಳಬೇಕು. ಇದನ್ನು ಅಷ್ಟು ಸುಲಭದಲ್ಲಿ ಮಾತನಾಡುವುದು ಬೇಡ. ನಾವು ನಿಜವಾಗಿಯೂ ಅಲ್ಲಿ ಏನು ನಡೆದಿದೆ ಅದನ್ನು ಮಾತ್ರ ಹೇಳುತ್ತಿದ್ದೇವೆ. ಯಾವ ಹಿನ್ನೆಲೆಯಲ್ಲಿ ಘಟನೆ ನಡೆಯಿತು, ನಡೆದಿರುವ ಘಟನೆಯನ್ನು ನಾನು ಸಮರ್ಥನೆ ಮಾಡುತ್ತಿಲ್ಲ ಆದರೆ ಇಂಥ ನಡೆಯದ ರೀತಿಯಲ್ಲಿ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುವುದು ನಮ್ಮ ಜವಾಬ್ದಾರಿ. ಬಂದ್‌ಗಳನ್ನು ಕರೆ ಕೊಟ್ಟಾಗ, ಪರಿಸ್ಥಿತಿಯು ವಿಕೋಪಕ್ಕೆ ಹೋದಾಗ ಲಾಠಿ ಚಾರ್ಜ್ ಮಾಡುವುದು, ಟಿಯರ್ ಗ್ಯಾಸ್ ಬರ್ನ್‌ಮಾಡುವುದು ನಡೆಯುತ್ತವೆ, ಬಂದ್‌ಗೆ ಕರೆಕೊಟ್ಟವರು ಎಲ್ಲಿಯೋ ಇರುತ್ತಾರೆ, ಅದನ್ನು ಕಾರ್ಯ ರೂಪಕ್ಕೆ ತರುವಾಗ ಮುಗ್ಧರು ಸಿಕ್ಕಿಹಾಕಿಕೊಳ್ಳುತ್ತಾರೆ. ಈಗಲೂ ಸಹ ಅಷ್ಟೆ, ಪ್ರತಿಬಂಧಕಾಜ್ಞೆ ಯನ್ನು ವಿರೋಧಿಸಿ ವಿಧಾನಸೌಧಕ್ಕೆ ನುಗ್ಗುವುದಕ್ಕೆ ಪ್ರಯತ್ನಪಟ್ಟರು ಆಗ ಪೋಲೀಸರು ಲಾಠಿ ಪ್ರಹಾರ ಮಾಡುವಾಗ ಇವರೂ ಸಿಕ್ಕಿಕೊಂಡರು.

ಶ್ರೀ ಪಿ. ರಾಮ್‌ದೇವ್.—ಪಾರ್ಲಿಮೆಂಟ್ ಮುಂದೆ ನಿಮ್ಮವರು ಸತ್ಯಾಗ್ರಹ ಮಾಡಿದಾಗ ಮೊರಾರ್ಜಿಯವರು ಗೋಳಿಬಾರ್ ಮಾಡಿಸಲಿಲ್ಲ.

ಶ್ರೀ ಆರ್. ಗುಂಡೂರಾವ್.—ಮೊರಾರ್ಜಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಬೊಂಬಾಯಿ ನಲ್ಲಿ ಏನು ಮಾಡಿದ್ದಾರೆನ್ನುವುದನ್ನು ಸ್ವಲ್ಪನೆನಪಿಗೆ ತೆಗೆದುಕೊಳ್ಳಿ.

ಶ್ರೀ ಪಿ. ರಾಮದೇವ್.—ಅದಕ್ಕೆ ಸಕಾರಣಗಳು ಇವೆ.

ಶ್ರೀ ಆರ್. ಗುಂಡೂರಾವ್.—ನಾನು ತಪ್ಪು ಹೇಳಿದ್ದರೆ ಅದನ್ನು ತಿದ್ದಿಕೊಳ್ಳುವುದಕ್ಕೆ ನಾನು ಸದಾ ಸಿದ್ಧನಿದ್ದೇನೆ. ಇಲ್ಲಿ ಯಾರು ಸರ್ಕಾರವನ್ನು ನಡೆಸುತ್ತಿದ್ದಾರೆನ್ನುವುದು ಮುಖ್ಯವಲ್ಲ, ನಾವಾದರೂ ನಿಜವಾದ ವಿಷಯಗಳನ್ನು ಸರಿಯಾದ ರೀತಿಯಲ್ಲಿ ತಿಳಿದುಕೊಂಡು ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇಂಥ ಸಂದರ್ಭಗಳಲ್ಲಿ ಲಾಠಿ ಚಾರ್ಜ್ ಆಗುವುದು ಸ್ವಾಭಾವಿಕ. ಪೇಪರ್ ಪ್ರತಿ ನಿಧಿಯ ಮೇಲೆ ಲಾಠಿ ಚಾರ್ಜ್ ಆಗಬಾರದಿತ್ತು, ಅದನ್ನು ನಾನೂ ಒಪ್ಪುತ್ತೇನೆ, ಆದರೆ ಅವರು ಅಲ್ಲಿ ಪ್ರತಿಕಾ ಪ್ರತಿನಿಧಿಯಾಗಿ ಕೆಲಸ ಮಾಡುವುದಕ್ಕೆ ಹೋಗಿದ್ದು ಕಡಿಮೆ ಎಂದು ನಮಗೆ ವರದಿ ಬಂದಿದೆ. ಆದ್ದರಿಂದ ನಾವು ಸರ್ಕಾರದ ಪತಿಯಿಂದ ಹೇಳುವುದಾದರೆ, ಇವರು ವರದಿ ತೆಗೆದು ಕೊಳ್ಳುವುದರ ಜೊತೆಗೆ ಪ್ರದರ್ಶನಕಾರಾಗಿ ಕೆಲಸ ಮಾಡಿದ್ದಾರೆ.

ಶ್ರೀ ಬಿ. ಮೈಕೇಲ್ ಫರ್ನಾಂಡಿಸ್.—ಅದರಲ್ಲಿ ಏನು ತಪ್ಪು ಇದೆ ?

ಶ್ರೀ ಆರ್. ಗುಂಡೂರಾವ್.—ತಪ್ಪೇನು ಇಲ್ಲ, ಆದರೆ ಇಂಥ ಘಟನೆಗಳು ನಡೆದಾಗ ನಾವು ಹೇಗೆ ಕ್ರಮತೆಗೆದುಕೊಳ್ಳಬೇಕು ? ಇವರು ಪ್ರದರ್ಶನಕಾರರನ್ನು ಪ್ರಚೋದನೆ ಮಾಡಿದ್ದಾರೆ, ಗುಂಪು ಪ್ರೊಹಿಬಿಟರಿ ಆರ್ಡರ್ಸ್‌ನ್ನು ವಯಲೇಟ್ ಮಾಡುವುದಕ್ಕೆ ಪ್ರಚೋದನೆ ಮಾಡಿದವರಲ್ಲಿ ಇವರೂ ಒಬ್ಬರಾಗಿದ್ದಾರೆ. ಪೋಲೀಸ್‌ನವರು ಲಾಠಿ ಚಾರ್ಜ್ ಮಾಡಿದಾಗ ಆ ಸ್ಥಳದಲ್ಲಿ ನಾನು ಹೋದರೂ ಸಹ ಅವರು ತಮ್ಮ ಕೆಲಸವನ್ನು ಮಾಡಿಯೇ ಮಾಡುತ್ತಾರೆ. ಹಾಗೆಯೇ ಇವರೂ ಅಲ್ಲಿದ್ದಾಗ, ಸಿಕ್ಕಿಕೊಂಡವರಲ್ಲಿ ಇವರೂ ಒಬ್ಬರಾಗಿರಬಹುದು.

ಶ್ರೀ ಮುಳ್ಳೂರು ಆನಂದರಾವ್.—ಮಾನ್ಯ ಮುಖ್ಯ ಮಂತ್ರಿಗಳು ಸತ್ಯಕ್ಕೆ ದೂರವಾದ ಸಂಗತಿಯನ್ನು ಹೇಳುತ್ತಿದ್ದಾರೆ.

ಶ್ರೀ ಆರ್. ಗುಂಡೂರಾವ್.—ನಾನು ಹೇಳುವುದು ವರದಿ ಪ್ರಕಾರ.

ಶ್ರೀ ಮುಳ್ಳೂರು ಆನಂದರಾವ್.—ನಾವು ಸತ್ಯವಾದ ವಿಚಾರವನ್ನು ಹೇಳುವಾಗ ತಾವು ಅದನ್ನು ತಿಳಿದು ಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಆರ್. ಗುಂಡೂರಾವ್.—ನಾವು ಸಹ ಸತ್ಯಸಂಗತಿಯ ಇನ್ನೊಂದು ಮುಖವನ್ನು ತಿಳಿಯುವುದಕ್ಕೆಪ್ರಯತ್ನ ಮಾಡುತ್ತಿದ್ದೇವೆ. ನೀವುಗಳು ಮೂರು ಗಂಟೆಗಳ ಕಾಲ ಮಾತನಾಡಿದ್ದೀರಿ, ನಾವು ಹೇಳುವುದನ್ನೂ ಸಹ ಸ್ವಲ್ಪ ಸಾವಧಾನದಿಂದ ಕೇಳಿ ?

4-00 P.M.

[Mr. Chairman Sri S. Muniraju in the Chair]

ಶ್ರೀ ಮಳ್ಳೂರು ಆನಂದರಾವ್.—ಹಾಗೆ ತಾವು ಹೇಳಿದ ಮೇಲೆ ಅಲ್ಲಿಗೆ ಮುಗಿಯಿತು. ಆದುದರಿಂದ ನಾನು ಸ್ಪಷ್ಟವಾಗಿ ಹೇಳುತ್ತೇನೆ, ತಾವು ಇನ್ನೊಂದು ಮುಖವನ್ನೂ ನೋಡಬೇಕು. ಅದಕ್ಕೆ ಹೇಳುವುದಕ್ಕೆ ನೀವು ನಮಗೆ ಅವಕಾಶವೇ ಕೊಡುವುದಿಲ್ಲವಲ್ಲಾ. ಅವಕಾಶ ಕೊಟ್ಟರೆ ಹೇಳುತ್ತೇನೆ.

ಛೇರ್ಮನ್.—ಮುಂದೆ ಬಡ್ಜೆಟ್ ಭಾಷಣ ಬರುತ್ತೆ, ಆವಾಗ ಹೇಳುವಿರಿ.

ಶ್ರೀ ಮಳ್ಳೂರು ಆನಂದರಾವ್.—ಈಗಲೇ ಹೇಳಿದರೆ ಅವರಿಗೆ ಸ್ವಲ್ಪ ಅನುಕೂಲವಾಗಬಹುದು.

ಶ್ರೀ ಆರ್. ಗುಂಡೂರಾವ್.—ಅದರಿಂದ ಈಗ ಏನೂ ಪ್ರಯೋಜನವಿಲ್ಲಾ.

ಶ್ರೀ ಮಳ್ಳೂರು ಆನಂದರಾವ್.—ತಮಗೆ ಈವಾಗ ನಾವೇನಾದರೂ ಹೇಳಿದರೆ ಅದರಲ್ಲಿ ಸತ್ಯ ಸಂಗತಿ ಏನು ಅನ್ನುವುದನ್ನು ತಿಳಿದುಕೊಂಡು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಆರ್. ಗುಡೂರಾವ್.—ಈಗ ಅದನ್ನು ಹೇಳುವ ಪ್ರಮೇಯವಿಲ್ಲಾ. ಅಲ್ಲ ಸ್ವಾಮಿ, ತಾವು ಮಾತನಾಡುವಾಗ ನಾನು ಒಂದು 'ಚ' ಕಾರ ಶಬ್ದವನ್ನೂ ಎತ್ತಲಿಲ್ಲಾ. ಅದರಂತೆ ನೀವು ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ನಮಗೆ ಇದರ ಬಗ್ಗೆ ಸತ್ಯ ಸಂಗತಿಯನ್ನು ತಿಳಿಸುವುದಕ್ಕೆ ಅವಕಾಶ ಕೊಡದೇ ಹೋದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಆರ್. ಗುಂಡೂರಾವ್.—ಮೊದಲು ನಾನು ಹೇಳುವುದನ್ನು ಕೇಳಿ. ನಾನು ಮೊದಲೇ ಹೇಳಿದ ಹಾಗೆ ಅಲ್ಲಿ ಏನು ನಡೆಯಿತು ಎಂದರೆ ಈ ಬಗ್ಗೆ ಪ್ರಚೋದನೆ ಮಾಡತಕ್ಕಂಥಾ ವ್ಯಕ್ತಿಗಳು ಯಾರು ಬಂದಿದ್ದರೋ ಅವರಲ್ಲಿ ಇವರೂ ಕೂಡ ಒಬ್ಬರಾಗಿದ್ದರು. ತಮಗೆ ಹೇಳಬೇಕಾದರೆ ಇಂತಹ ವರದಿ ಮಾಡಬೇಕಾದರೆ ಪತ್ರಿಕಾ ವರದಿ ಮಾಡಬೇಕಾದರೆ ಪತ್ರಿಕಾ ಕರ್ತರು ಒಬ್ಬರೇ ಹೋಗುವುದಿಲ್ಲ. ೪-೫ ಜನ ಪತ್ರಿಕಾಕರ್ತರು ಹೋಗುತ್ತಾರೆ. ಅಲ್ಲಿ ಈ ರೀತಿಯಾಗಿ ಪ್ರಚೋದನೆ ಮಾಡಿದಾಗ, ಅಲ್ಲಿ ಗಲಾಟೆ ನಡೆದಾಗ ಇವರಿಗೊಬ್ಬರಿಗೇನೇ ಹೊಡೆಯುವುದಿಲ್ಲ. ಯಾರ್ಯಾರು ಅಲ್ಲಿ ಇರುತ್ತಾರೋ ಅವರಿಗೆಲ್ಲಾ ಪೋಲೀಸಿನವರು ಹೊಡೆಯುತ್ತಾರೆ. ಅಲ್ಲಿ ಯಾರೇ ಇರಲಿ, ಎಂ.ಎಲ್.ಎ.ನೇ ಇರಲಿ, ಎಂ.ಪಿ.ನೇ ಇರಲಿ ನೀವೇ ಇರಲಿ, ನಾನೇ ಇರಲಿ ಅವರು ಹೊಡೆಯುತ್ತಾರೆ, ಅದು ಎಲ್ಲರಿಗೂ ಗೊತ್ತಿರುವ ವಿಷಯ. ಅದು ಇಡೀ ರಾಜ್ಯಕ್ಕೆ ಗೊತ್ತಿರುವ ವಿಷಯ.

ಶ್ರೀ ಅಜೀಜ್ ಸೇಟ್.—ಹಾಗಾದರೆ ಪೋಲೀಸರು ಇರುವುದು ಹೊಡೆಯುವುದಕ್ಕೆ ಅಂದರೆ so beautifully you have analysed that Police means beating. Where is the end of it ?

ಶ್ರೀ ಆರ್. ಗುಂಡೂರಾವ್.—ತಮ್ಮ ಕಾಲದಲ್ಲಿ ಏನೇನು ಮಾಡಿದಿರಿ ಎನ್ನುವುದು ಎಲ್ಲರಿಗೂ ಗೊತ್ತಿದೆ. ಗಲಾಟೆ ನಡೆಯುತಕ್ಕಂಥ ಸಂದರ್ಭದಲ್ಲಿ ಅಲ್ಲಿಗೆ ಮುಖ್ಯಮಂತ್ರಿಗಳು ಹೋದರೂ ಹೊಡೆಯುತ್ತಾರೆ, ಐ.ಜಿ.ಪಿ. ಯವರು ಏನಾದರೂ ಸಿವಿಲ್ ಡ್ರೆಸ್‌ನಲ್ಲಿ ಹೋದರೆ ಅವರನ್ನೂ ಹೊಡೆಯಬಹುದು. ಸಂದರ್ಭ ಬಂದರೆ ಪ್ರಧಾನಿ ಮಂತ್ರಿಗಳೇನಾದರೂ ಅಲ್ಲಿ ಇದ್ದರೆ ಅವರನ್ನೂ ಹೊಡೆಯಬಹುದು.

ಶ್ರೀ ಮೈಕಲ್ ಫರ್ನಾಂಡಿಸ್.—ಹಾಗಾದರೆ It has already become a Police Raj then.

ಶ್ರೀ ಆರ್. ಗುಂಡೂರಾವ್.—ನಿಮ್ಮ ಸರ್ಕಾರ ಬಂದಾಗ ಏನು ಮಾಡಿದರು ಅದನ್ನೂ ಸಹ ನಾನು ನೋಡಿದ್ದೇನೆ. ಎಲ್ಲೆಲ್ಲಿ ಗಲಾಟೆ ಆಗಿದೆ ಅಲ್ಲೆಲ್ಲಾ ಹೊಡೆದಿದ್ದಾರೆ.

ಶ್ರೀ ಅಜೀಜ್‌ಸೇಟ್.—ಹಾಗಾದರೆ ಅವಕಾಶ ಸಿಕ್ಕಿತು ಎಂದರೆ ಎಲ್ಲರನ್ನೂ ಹೊಡೆಯಬೇಕೇನು

ಶ್ರೀ ಆರ್ ಗುಂಡೂರಾವ್.—ಸ್ವಾಮಿ, ನೀವು ಸರ್ಕಾರ ನಡೆಸುತ್ತಿದ್ದಾಗ ಏನೇನು ಮಾಡಿದಿರಿ ಎನ್ನುವುದು ನನಗೆ ಗೊತ್ತಿದೆ. ತಮಗೆ ಹೇಳಬೇಕಾದರೆ ಮೈಸೂರಿನಲ್ಲಿ ಒಂದು ಸಾರಿಗೆ ಗಲಾಟೆ ನಡೆದಾಗ ಹಾಸ್ಟೆಲ್‌ಗೆ ಪೋಲೀಸಿನವರು ಹೋಗಿ ಹುಡುಕಿಹುಡುಕಿಕೊಂಡು ಹೋಗಿ ಹೊಡೆದಿದ್ದಾರೆ ಅನ್ನುವುದರ ಬಗ್ಗೆ ನಾವೆಲ್ಲಾ ಗಲಾಟೆ ಮಾಡಿದ್ದೇವೆ. ಅವರು ಅಲ್ಲಿ ಇದ್ದವರನ್ನೆಲ್ಲಾ ಹೊಡೆಯುತ್ತಾರೆ ಅನ್ನುವುದರ ಬಗ್ಗೆ ಸಾಕಷ್ಟು ಸಲ ನಿಮ್ಮ ಗಮನಕ್ಕೆ ತಂದಿದ್ದೇವೆ. ಆದುದರಿಂದ ಮತ್ತೆ ಅದರ ಬಗ್ಗೆ ಪ್ರಸ್ತಾಪ ಮಾಡುವುದು ಬೇಡ. ಈಗ ನಮ್ಮ ಮುಂದಿರತಕ್ಕಂಥಾ ವಿಷಯದ ಬಗ್ಗೆ ಮಾತನಾಡೋಣ. ಈಗ ನಮ್ಮ ದೇಶದಲ್ಲಿ ದಲಿತ ವರ್ಗದ ಜನಾಂಗಕ್ಕೆ ಅನ್ಯಾಯವಾಗಿದೆ ಅನ್ನುವ ಅಭಿಪ್ರಾಯಕ್ಕೆ ಬಂದಿದ್ದೇವೆ. ಇವರಿಗೆ ನಾವು ಸರಿಯಾದ ನ್ಯಾಯವನ್ನು ಒದಗಿಸಿಕೊಡಬೇಕು, ಅದು ಸರ್ಕಾರದ ಕರ್ತವ್ಯವೂ ಸಹ ಆಗಿರುತ್ತದೆ. ಈ ವಿಚಾರದಲ್ಲಿ ಸರ್ಕಾರವೂ ಯಾವೊತ್ತೂ ಕೂಡ ಹಿಂದೆ ಬೀಳುವುದಿಲ್ಲಾ ; ಎಂದು ಹೇಳುತ್ತೇನೆ. ಈ ವಿಷಯದಲ್ಲಿ ಸ್ಥಳೀಯ ಮಟ್ಟದ ಅಧಿಕಾರಿಗಳಾಗಲಿ ರಾಜ್ಯ ಮಟ್ಟದ ಅಧಿಕಾರಿಗಳಾಗಲಿ ಜಿಲ್ಲಾ ಮಟ್ಟದ ಅಧಿಕಾರಿಗಳಾಗಲಿ ಅಥವಾ ಎಲ್ಲೆಲ್ಲಿ ಯಾರ್‍ಯಾರು ಅವರ ಕರ್ತವ್ಯದಲ್ಲಿ ಅಲಕ್ಷ್ಯ ತೋರಿಸುತ್ತಾರೋ ಅಥವಾ ಕರ್ತವ್ಯದಲ್ಲಿ ಏನಾದರೂ ಚ್ಯುತಿ ಮಾಡಿದರೆ ಅದನ್ನು ಯಾವರೀತಿ ಸರಿಪಡಿಸಬೇಕು ಅನ್ನುವುದಕ್ಕೆ ಈ ಸರ್ಕಾರ ಹಿಂದೆ ಬೀಳುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಅವರಿಗೆ ಏನು ಅನ್ಯಾಯವಾಗಿದೆ ಅನ್ನುವುದರ ಬಗ್ಗೆ ಅವರಿಂದ ಒಂದು ಮನವಿಯನ್ನು ತರಿಸಿಕೊಂಡು ಸೂಕ್ತವಾಗಿ ಆ ವಿಷಯದಲ್ಲಿ ಏನು ಪರಿಶೀಲನೆ ಮಾಡಬೇಕೋ ಅದನ್ನು ಮಾಡುತ್ತೇನೆ. ಇದರ ಜೊತೆಗೆ ತಾವುಗಳು ಹೇಳಿದಂಥಾ ವಿಷಯಗಳನ್ನೂ ಸಹ ನಮ್ಮ ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಆದರೆ ಎಲ್ಲಾ ವಿಷಯಕ್ಕೂ ಇದನ್ನು ಹೋಲಿಸಬೇಡಿ. ನಿನ್ನೆ ನಡೆದಂಥಾ ಘಟನೆಗೂ ಮತ್ತು ಶೇಷಗಿರಿಯಪ್ಪನ ಒಂದು ಕೊಲೆಗೂ ಏನೂ ಸಂಬಂಧವಿಲ್ಲಾ. ಇಲ್ಲಿ ಲಾಠಿಛಾರ್ಜು ಮಾಡಿದ್ದು ವಿಧಾನಸೌಧದ ಸುತ್ತು ಮುತ್ತ ಇದ್ದಂಥಾ ಪ್ರೊಹಿಬಿಟರಿ ಆರ್ಡರನ್ನು ಧಿಕ್ಕರಿಸಿದ್ದರಿಂದ ಆಗಿದೆ. ಇದರಲ್ಲಿ ಕೆಲವು ನಾಯಕರು ಸೇರಿಕೊಂಡು ರಾಜಕೀಯ ಪ್ರಚೋದನೆ ಮಾಡಿದ್ದರಿಂದ ಈರೀತಿ ಆಗಿದೆ, ಆ ವಿಷಯವನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಆದುದರಿಂದ ಈ ವಿಷಯದಲ್ಲಿ ಪೋಲೀಸಿನವರು ಅತಿರೇಕ ಏನೂ ಮಾಡಲಿಲ್ಲಾ ತಮ್ಮ ಕರ್ತವ್ಯವನ್ನು ಮಾಡಿದ್ದಾರೆ ಎಂದು ಹೇಳುತ್ತೇನೆ. ಅಷ್ಟೇ ಅಲ್ಲದೆ ಅವರು ಆಸ್ಪತ್ರೆಗೆ ಹೋಗಿದ್ದಾರೆ. ಅನುಸೂಯ ಅವರನ್ನು ವಿಚಾರಿಸಿದ್ದಾರೆ, ಅವರೂ ಸಹ ಯಾವುದೇ ರೀತಿಯಾಗಿ ನನ್ನನ್ನು ಅಸಲ್ಟ್ ಮಾಡಿಲ್ಲಾ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಬೌರಿಂಗ್ ಆಸ್ಪತ್ರೆಯಲ್ಲಿರುವ ಡಾಕ್ಟರ್ ನಾರಾಯಣಪ್ಪ, ಅವರೂ ಕೂಡ ಅವರನ್ನು ಚೆನ್ನಾಗಿ ಟ್ರೀಟ್ ಮಾಡಿದ್ದಾರೆ. ಮತ್ತು ಅನುಸೂಯ ಅವರನ್ನು ಅರೆಸ್ಟ್ ಮಾಡಬೇಕಾದರೆ ಇಬ್ಬರು ಮಹಿಳಾ ಕಾನ್‌ಸ್ಟೇಬಲ್ಸ್‌ಗಳನ್ನು ಕರೆದುಕೊಂಡು ಹೋಗಿ ಅರೆಸ್ಟ್ ಮಾಡಿದ್ದಾರೆ. ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಚೆನ್ನಾಗಿ ಟ್ರೀಟ್‌ಮೆಂಟ್ ಕೊಡಿಸಿದ್ದಾರೆ. ಅವರು ಬಹಳ ದೂರದಿಂದ ನಡೆದುಕೊಂಡು ಬಂದಿದ್ದರಿಂದ ಸ್ವಲ್ಪ ಕಾಲುನೋವು ಇತ್ತು ಎಂದು ಅವರೇ ಹೇಳಿದ್ದಾರೆ. ಯಾರೂ ಕೂಡ ನನ್ನನ್ನು ಅಸಾಲ್ಟ್ ಮಾಡಿಲ್ಲಾ ಎಂದು ಡಾಕ್ಟರ್ ಮುಂದೆ ಅವರೇ ಹೇಳಿದ್ದಾರೆ. ಅರೆಸ್ಟ್ ಮಾಡಿದ ೧೫೦ ಜನರನ್ನು ಯಾವ ರೀತಿಯಾಗಿ ಬಿಟ್ಟಿದ್ದಾರೋ ಅದೇ ರೀತಿಯಾಗಿ ಇವರನ್ನು ಬಿಟ್ಟಿದ್ದಾರೆ. 150 people were realesed on their bounds and along with them, this lady was also sent. ಆದುದರಿಂದ ಅವರಿಗೆ ಯಾವ ರೀತಿಯಾಗಿಯೂ ತೊಂದರೆಯಾಗಿಲ್ಲಾ. ಈ ವಿಷಯದಲ್ಲಿ ಯಾವ ರೀತಿಯಾಗಿ ಕಾನೂನು ಪರಿಪಾಲನೆ ಮಾಡಬೇಕಾದರೂ ಸಹ ಸರ್ಕಾರ ಮತ್ತು ಪೋಲೀಸ್ ಇಲಾಖೆ ಕೈಗೊಳ್ಳುತ್ತದೆ. ಇದು ಈ ಇಲಾಖೆಯ ಮಿತಿಗೆ ಒಳಪಡುವುದರಿಂದ ಇದರ ಬಗ್ಗೆ ಪೋಲೀಸಿನವರು ಸರಿಯಾದ ಕ್ರಮ ಕೈಗೊಂಡಿದ್ದಾರೆ ಯಾವ ರೀತಿಯಾಗಿಯೂ ಇದರಲ್ಲಿ ಅತಿರೇಖವಾಗಲಿ ಅಥವಾ ಸರ್ಕಾರಕ್ಕೆ ಒಂದು ಹೆಸರು ಬರಬೇಕು ಅನ್ನುವುದರ ಬಗ್ಗೆಯಾಗಲಿ ಮಾಡಿಲ್ಲಾ. ಈ ದಲಿತ ವರ್ಗದವರಲ್ಲಿ ಕೆಲವರು ನಾಯಕರು ಪ್ರಚೋದನೆ ಮಾಡಿ ಈ ಪ್ರೊಹಿಬಿಟರಿ ಆರ್ಡರನ್ನು ಉಲ್ಲಂಘನೆ ಮಾಡಿದ್ದರಿಂದ ಈ ಪ್ರಶ್ನೆ ಬಂದಿದೆಯೇ ವಿನಾ ಇದರಲ್ಲಿ ಅವರಿಗೆ ಸರಿಯಾದಂಥಾ ನ್ಯಾಯವನ್ನು ಒದಗಿಸಿಕೊಡುವುದಕ್ಕೆ ನಾವೇನೂ ಹಿಂದೆ ಬೀಳುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರು ಈ ಬಗ್ಗೆ ಈಗ ಏನೊಂದು ನಿಲುವಳಿ ಸೂಚನೆಯನ್ನು ತಂದಿದ್ದಾರೋ ಅದನ್ನು ನಾವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲಾ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

SRI A. LAKSHMISAGAR (Chickpet).— I have only two points to ask by way of clarification.

CHAIRMAN.— He has already replied in to.

SRI A. LAKSHMISAGAR.—There are certain doubts.

CHAIRMAN.—You can ask one or two questions.

SRI A. LAKSHMISAGAR.—The Samithi people were instigated by persons not connected with the object for which the Samithi people had come to Bangalore. This is the main burden of the Chief Minister's statement. This is an allegation which can be hardly justified in regard to the Dalith Sengarsh people who have been trying to expose the manner in which Police people in Kolar District particularly in Malur taluk where Hunsikotte comes under its jurisdiction has been doing. Therefore, it does no credit to the Chief Minister to tell that they were instigated. The other one is with regard to the assult on the Press Reporter. According to my information, Mr. Chairman, the Press Reporter told the Police-Look here, I have the Accreditation Card with me. I am a Press Reporter here convering this particular matter." Even then, he was beaten. He did not refer to that matter. If he was beaten as one of the persons among the Samithi members, it is a different matter but according to my information, he showed his Card of Accreditation as a Reporter specifically sent for convering this from a long distance. If that is so, it speaks volumes of the conduct of the Police. Sir, I want an assurance from the Hon'ble Chief Minister. The main burden of the entire matter that we wanted to bring to the notice of the Government is that, notwithstanding declaration of the Government that the Government is there for the protection of the oppressed, depressed and other weaker sections of the people, successive instances have been brought to the notice of the Government that influential section of the society have been continuously and mercilessly suppressing...

SRI R. GUNDU RAO.—If the hon. Member wants one or two clarifications, I am prepared to answer and not other things. Their rights have been completely trampled upon. There is no protection to the weaker sections of the people.

CHAIRMAN.—I am sorry, this is no clarification.

SRI A. LAKSHMISAGAR.—I want to know what is the stand of the Government on this issue?

SRI R. GUNDU RAO.—Let the hon. member not generalise the issue.

SRI A. LAKSHMISAGAR.—I can give any number of instances.

SRI R. GUNDU RAO.—I am prepared to reply to a clarification but if the hon. member wants to speak in a general way, there are other occasions for him to do so.

ಚೇರ್‌ಮನ್.—ಹುಣಸೇಕೋಟೆ ಪ್ರಕರಣದ ಬಗ್ಗೆ ತಾವು ಕ್ಲಾರಿಫಿಕೇಷನ್ ಕೇಳಬಹುದೇ ಹೊರತು, ಜನರಲ್ ಆಗಿ ತಾವು ಹೇಳುತ್ತಾ ಹೋಗುವುದು ಸರಿಯಲ್ಲ.?

SRI A. LAKSHMISAGAR.—Sir, it is not general. This instance is symptom of the society with which the society is suffering from. I say that the weaker sections are not getting necessary protection from the Police and the Revenue Authorities. What is the policy of the Government in rendering effective and timely help for the protection of the weaker sections of the society? Seshagiriyappa's case is a telling instance of the symptom.

CHAIRMAN.—The Hon'ble Chief Minister has clearly stated it.

SRI A. LAKSHMISAGAR.—Sir, the Chief Minister did not touch upon this aspect of the matter.

ಶ್ರೀ ಮಳ್ಳೂರು ಆನಂದರಾವ್.—ನಾನು ಎರಡು ಪ್ರಶ್ನೆಗಳನ್ನು ಮಾತ್ರ ಕೇಳುತ್ತೇನೆ. ಲಾಠಿ ಚಾರ್ಜ್ ಆಗಿದ್ದು ಎಲ್ಲಿ? ಆ ಜನರು ಎಲ್ಲಿಯವರೆಗೆ ಬಂದಿದ್ದರು? ಅವರು ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಬಂದಿದ್ದರೇ ಅಥವಾ ಕಬ್ಬನ್-ಪಾರ್ಕಿನಲ್ಲಿಯೇ ಅವರನ್ನು ಹೊಡೆಯಲಾಯಿತೇ? ನಾವುಗಳೇ ವಿಧಾನಸೌಧದೊಳಗೆ ಬರುವುದು ಕಷ್ಟವಿರುವಾಗ ಅವರು ಯಾವ ರೀತಿ ಬರುತ್ತಾರೆ? ಆದ ಕಾರಣ ಅವರು ವಿಧಾನಸೌಧದೊಳಗೆ ನುಗ್ಗುತ್ತೇವೆಂದು ಹೇಳಿದಾಗ ಹೊಡೆದರೇ ಅಥವಾ ಯಾವಾಗ ಹೊಡೆದರು ಎಂಬುದನ್ನು ತಿಳಿಸಬೇಕು?

ಇನ್ನು ಪತ್ರಿಕಾಕರ್ತರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿವರಣೆ ಕೊಟ್ಟರು. ಗುಂಪಿನಲ್ಲಿದ್ದಾಗ ಯಾರು ಎಂಬುದನ್ನು ಪತ್ತೆ ಮಾಡಲು ಆಗುವುದಿಲ್ಲವೆಂದು ಅವರು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಆ ಸಮಯದಲ್ಲಿ ನಾನು ಇದ್ದರೂ ಹೊಡೆಯುತ್ತಾರೆ, ಮಾನ್ಯ ಗುಂಡೂರಾಯರೇ ಇದ್ದರೂ ಹೊಡೆಯುತ್ತಾರೆ. ಒಂದುವೇಳೆ ನಮ್ಮಗಳ ಸೈಜನ್ನು ನೋಡಿ ಬಿಟ್ಟರೂ ಬಿಡಬಹುದು. ಆದರೆ ಈ ಪತ್ರಿಕಾ ಕರ್ತರನ್ನು ಅಲ್ಲಿ ನಡೆದ ವಿದ್ಯಮಾನಗಳನ್ನು ನೋಡಿ ವರದಿ ಮಾಡುವ ಸಲುವಾಗಿ ಪತ್ರಿಕಾ ಕಛೇರಿಯಿಂದ ಕಳುಹಿಸಿದ್ದರು. ತಮಗೇನಾದರೂ ಅನುಮಾನವಿದ್ದರೆ ಅಲ್ಲಿಗೆ ಬರೆದು ಅವರು ಕಳುಹಿಸಿದ್ದರೆ ಅಥವಾ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಬಹುದು ಈ ಪತ್ರಿಕಾ ಪ್ರತಿನಿಧಿ ತಾನು ವಿಷಯ ಸಂಗ್ರಹಣೆಗೆ ಬಂದಿದ್ದೆನೆಂದು ಹೇಳಿದರೂ ಸಹ ಅಲ್ಲಿದ್ದ ಎ.ಸಿ.ಪಿ. ಅವರು ಅವರನ್ನು ಹೊಡೆದಿದ್ದಾರೆ. ಇದು ನಿಜವೋ ಅಥವಾ ಅಲ್ಲವೋ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕು. ಈ ಪತ್ರಿಕಾಕರ್ತರು ತಮ್ಮ ಗುರುತಿನ ಚೀಟಿಯನ್ನು ತೋರಿಸಿ, ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ ಎಂದು ಕೇಳಿದಾಗ, ಆ ಎ.ಸಿ.ಪಿ. ಅವರು ಉಪಯೋಗಿಸಿದ ಮಾತಗಳನ್ನು ಇಲ್ಲಿ ಉಪಯೋಗಿಸಲು ಸಾಧ್ಯವಿಲ್ಲ. ಅಂತಹ ಶಬ್ದಗಳನ್ನು ಅವರು ಉಪಯೋಗಿಸಿದ್ದಾರೆ ಮತ್ತು ಅವರನ್ನು ಹೊಡೆದಿದ್ದಾರೆ. ಆದಕಾರಣ ಇವರ ಬಗ್ಗೆ ನನ್ನ ಪ್ರಶ್ನೆ ಏನೆಂದರೆ, ಮಾಸ್-ಲಾಠಿಚಾರ್ಜ್ ಆದಾಗ ಇವರನ್ನು ಸೇರಿಸಿ ಹೊಡೆಯಲಾಯಿತೋ ಅಥವಾ ಬೇರೆ ಸಮಯದಲ್ಲಿ ಹೊಡೆದರೋ ಎಂಬುದನ್ನು ತಿಳಿಸಬೇಕು?

SRI AZEEZ SAIT.—The Hon'bl Chief Minister has given as Statement. Those people had come all the way from Hunusekote to meet the Chief Minister and there was a lathi-charge, they were arrested and some prosecuted also and F.I.R. has been filed before the Court. These people have to come to Bangalore on the days of hearing. On humanitarian grounds, I request the Hon'ble Chief Minister to drop

the proceedings, give them an opportunity to meet the Chief Minister and sort out their difficulties and grievances. Will the Hon'ble Chief Minister agree to this?

ಶ್ರೀ ಆರ್. ಗುಂಡೂರಾವ್.—ಈ ಬಗ್ಗೆ ನಾನು ಮೊದಲೇ ಹೇಳಿದೆ. ಆಗ ತಾವು ಇರಲಿಲ್ಲ. ಅವರು ನನ್ನ ಜೊತೆಯಲ್ಲಿ ಮಾತನಾಡಲು ಅವಕಾಶ ಕೊಡಬಾರದೆಂದು ಅಭಿಪ್ರಾಯ ನನಗಿರಲಿಲ್ಲ.

ಇನ್ನು ರಾತ್ರಿ ಎಂಟೂವರೆ ಗಂಟೆಯ ಸಮಯದಲ್ಲಿ ಪ್ರಜಾವಾಣಿ ಪತ್ರಿಕೆಯ ಚೀಫ್ ರಿಪೋರ್ಟರ್ ಅವರು ಪೋಲೀಸರಿಗೆ ದೂರು ಕೊಟ್ಟಿದ್ದಾರೆ. ಆ ಬಗ್ಗೆ ಕೇಸ್ ರಿಜಿಸ್ಟರ್ ಆಗಿದೆ. ಅದರ ಬಗ್ಗೆ ವಿಚಾರಣೆ ಯಾವ ರೀತಿ ಆಗುತ್ತದೋ ನೋಡೋಣ. ಆದರೆ ಎ. ಸಿ. ಪಿ. ಅವರು ಆ ಪತ್ರಿಕಾಕರ್ತರನ್ನು ಹೊಡೆದಿಲ್ಲ.

ಶ್ರೀ ಅಜೀಜ್ ಸೇಟ್—ವಿಚಾರಣೆಯಾಗುತ್ತಿದೆ ಎಂದು ಒಂದು ಕಡೆ ಹೇಳುತ್ತೀರಿ, ಮತ್ತೊಂದು ಕಡೆ ಅವರು ಹೊಡೆದಿಲ್ಲವೆಂದು ಹೇಳುತ್ತೀರಿ; ತಾವೆ ಈ ರೀತಿ ಹೇಳಿದರೆ ವಿಚಾರ ' ಯಾವ ರೀತಿ ಆಗುತ್ತದೆ? ವಿಚಾರಣೆಗೆ ಮೊದಲೇ ತಾವು ಆ ರೀತಿ ತೀರ್ಮಾನಕ್ಕೆ ಬರಬಾರದು.

ಶ್ರೀ ಆರ್. ಗುಂಡೂರಾವ್.—ಮಾನ್ಯ ಆನಂದರಾವ್ ಅವರು ಪತ್ರಿಕಾ ವರದಿಗಾರರನ್ನು ಹೊಡೆದವರು ಯಾರು ಮತ್ತು ಲಾಠಿಚಾರ್ಜ್ ಎಲ್ಲಿ ಆಯಿತು ಎಂದು ಕೇಳಿದ್ದಾರೆ. ವಿಧಾನಸೌಧದ ಮುಂದೆ ಇರತಕ್ಕಂಥ ಗೋಪಾಲಗೌಡವೃತ್ತದ ಬಳಿ ಅವರುಗಳು ಬಂದಾಗ ಲಾಠಿಚಾರ್ಜ್ ಆಯಿತು. ಆದರೆ ಎ.ಸಿ.ಪಿ. ಅವರು ಪತ್ರಿಕಾ ವರದಿಗಾರರನ್ನು ಹೊಡೆದಿಲ್ಲವೆಂದು ನನಗೆ ವರದಿ ಬಂದಿದೆ. ಆದರೆ ಅವರೇ ಹೊಡೆದರೆಂದು ರಾತ್ರಿ ಎಂಟೂವರೆ ಗಂಟೆಯ ಸಮಯದಲ್ಲಿ ಕಂಪ್ಲೇಟ್ ಕೊಟ್ಟಿದ್ದಾರೆ. ಪೋಲೀಸಿನವರು ಕೂಡಲೇ ಅದನ್ನು ರಿಜಿಸ್ಟರ್ ಮಾಡಿಕೊಂಡಿದ್ದಾರೆ.

ಶ್ರೀ ಎ. ಲಕ್ಷ್ಮಿಸಾಗರ್.—ಆ ವರದಿಗಾರರು ತಮ್ಮಗುರುತನ್ನು ಹೇಳಿದ ಮೇಲೂ ಸಹ ಹೊಡೆದರು ಎಂಬತಕ್ಕಂಥ ಆರೋಪವಿದೆ. ಅದು ನಿಜವೇ?

ಶ್ರೀ ಆರ್. ಗುಂಡೂರಾವ್.—ವಿಚಾರಣೆ ನಡೆಯುತ್ತಿದೆ. ವಿಚಾರಣೆ ಮುಗಿದ ಮೇಲೆ ಅದು ಗೊತ್ತಾಗುತ್ತದೆ. ಇದರ ಬಗ್ಗೆ ವಿವರವಾಗಿ ಹೇಳಬೇಕೆಂದರೆ, ನಾನು ನಾಲ್ಕೈದು ದಿವಸಗಳ ಹಿಂದೆ ಮಾಲೂರು ತಾಲ್ಲೂಕಿಗೆ ಹೋಗಿದ್ದೆ. ಆಗ ಈ ಕೊಲೆ ಪ್ರಕರಣ ನಡೆದ ಹುಣಸೆಕೋಟೆಗೆ ನಾಲ್ಕು ಮೈಲಿ ದೂರದಲ್ಲಿರತಕ್ಕಂಥ ತೊರಲಕ್ಕಿ ಗ್ರಾಮಕ್ಕೂ ಸಹ ಹೋಗಿದ್ದೆ. ಅಲ್ಲಿ ದೇವಸ್ಥಾನದ ಒಂದು ಸಮಾರಂಭವಿತ್ತು. ಜೊತೆಗೆ ಅಲ್ಲಿಯೇ ದಲಿತ ವರ್ಗದ ಕಮ್ಯೂನಿಟಿ ಸೆಂಟರ್‌ಗೆ ಫೌಂಡೇಷನ್ ಸ್ಟೋನ್ ಹಾಕುವ ಕಾರ್ಯಕ್ರಮವೂ ಇತ್ತು. ಆ ಸಮಾರಂಭಕ್ಕೆ ಶ್ರೀಮತಿ ರೇಣುಕಾ ರಾಜೇಂದ್ರನ್ ಅವರು ಹಾಗೂ ಎಂ.ಎಲ್.ಎ. ಆಗಿರುವ ಶ್ರೀ ಪಿ ಎಸ್. ರೆಡ್ಡಿ ಅವರೂ ಸಹಾ ಬಂದಿದ್ದರು. ಅಧಿಕಾರಿಗಳು ಸಹ ಇದ್ದರು. ನಾನು ಅಲ್ಲಿಗೆ ಬೆಳಗ್ಗೆ ೯ ಗಂಟೆಗೆ ಹೋಗಿ ಮಧ್ಯಾಹ್ನ ೩ ಗಂಟೆಯುವರೆಗೂ ಅಲ್ಲಿಯೇ ಇದ್ದು ನಂತರ ವಾಪಸ್ ಬಂದೆ. ಅಲ್ಲಿ ಸಾವಿರಾರು ಜನರು ಸೇರಿದ್ದರು. ಆದರೆ ಈ ಪ್ರಕರಣದ ಬಗ್ಗೆ ಯಾರೂ ಸಹ ನನಗೆ ಕಂಪ್ಲೈಂಟ್ ಕೊಡಲಿಲ್ಲ. ಅಂದರೆ ಅವರು ಇಲ್ಲಿಗೆ ಬಂದಿದ್ದು ತಪ್ಪು ಎಂದು ಹೇಳುವುದಿಲ್ಲ. ಇಲ್ಲಿಗೇ ಬಂದು ಮನವಿ ಕೊಡಬೇಕೆಂಬುದು ಅವರ ಕಾರ್ಯಕ್ರಮವಾಗಿತ್ತೆಂದು ಕಾಣುತ್ತದೆ. ಅದು ಏನೇ ಇರಲಿ, ಆದರೆ ಆ ದಿನ ಅಲ್ಲಿ ಅನೇಕ ಜನರು ಬಂದು ನನ್ನನ್ನು ಭೇಟಿ ಮಾಡಿದರು. ಅರ್ಧ ಗಂಟೆಯುವರೆಗೆ ಭಾಷಣ ಸಹ ಮಾಡಿದೆ. ನಂತರ ದೇವಸ್ಥಾನದ ಪಕ್ಕದಲ್ಲಿರುವ ಛತ್ರದಲ್ಲಿಯೇ ಊಟ ಮಾಡಿಕೊಂಡು ವಾಪಸ್ ಬಂದೆ. ಆ ಸಂದರ್ಭದಲ್ಲಿ ಈ ಹುಣಸೆಕೋಟೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾರೂ ಸಹ ಬಂದು ಮನವಿ ಕೊಡಲಿಲ್ಲ. ಅವರು ಬೆಂಗಳೂರಿಗೆ ಬಂದು ಮನವಿ ಕೊಡಬೇಕೆಂದಿದ್ದಾಗ, ಯಾರೋ ಕೆಲವರು ಅವರಿಗೆ ಪ್ರೇರೇಪಣೆ ಮಾಡಿದ್ದಾರೆ. ಇಂತಹವರು, ಇಂತಹ ಪಕ್ಷದವರು ಎಂದು ನಾನು ಹೇಳುವುದಿಲ್ಲ. ಅವರು ಆಂಟಿ–ಸೋಸಿಯಲ್ ಜನರಿದ್ದರೂ ಇರಬಹುದು. ಕೆಲವರಿಗೆ ಏನು ಆಶೆ ಇರುತ್ತದೆಂದರೆ, ಅತ್ತ ಕಡೆ ಇರುವವರಿಗೆ ಇಲ್ಲವೇ ಇತ್ತ ಕಡೆ ಇರುವವರಿಗೆ ಹೇಳಿಕೊಟ್ಟು ಮಧ್ಯ ನಿಂತುಕೊಂಡು ತಮಾಷೆ ನೋಡುವುದು, ಇಂತಹ ಜನರೂ ಇರುತ್ತಾರೆ.

ನೋಡಿದ್ದೆಲ್ಲಾ ನಮಗೇ ಆಗಬೇಕು, ನಮಗೇ ಬೇಕು ಎನ್ನತಕ್ಕಂಥ ಜನರೂ ಇದ್ದಾರೆ. ಯಾರಾದರೂ ರಾಜಕೀಯ ವ್ಯಕ್ತಿಗಳನ್ನು ಮುಂದಿಟ್ಟುಕೊಂಡು ಕೆಲಸ ಮಾಡಿದರೆ ನಮ್ಮ ಹೆಸರು ಜನರ ಮನಸ್ಸಿನಲ್ಲಿ ಉಳಿಯುತ್ತದೆ, ನಾಳೆ ನಾವು ಮಂತ್ರಿಯಾದರೆ ಬೆಂಗಳೂರಿನಲ್ಲಿ ಸುಖವಾಗಿರಬಹುದು ಎಂದು

ಯೋಚನೆ ಮಾಡುತ್ತಾರೆ, ಈ ವರ್ಗದ ಜನರು ಏನಿದ್ದಾರೆ ಇವರೆಲ್ಲಾ ಸೇರಿಕೊಂಡು ಈ ರೀತಿ ಮಾಡಿದ್ದಾರೆ. ಇಂತಹ ನಾಲ್ಕಾರು ಜನರನ್ನು ತೆಗೆದುಕೊಂಡು ಸುಲಭವಾಗಿ ಪಟ್ಟಿ ಮಾಡುವುದಕ್ಕೆ ಅವಕಾಶವಿದೆ ಅದೇನೇ ಇದ್ದರೂ even tomorrow, if Sri C.M. Arumugham comes with the delegation of 5 or 10 members to meet me, I am prepared to meet them either at my House or at the Office wherever he pleases. So, there is nothing wrong in meeting the people. Afterall· we are here to meet the people. The incident took place on account of the reason which I have already given.

SRI C.M. ARUMUGHAM.—Sir, the Hon. Chief Minister has agreed that those people were innocent. They came exclusively to meet the Hon. Chief Minister and the Hon Speaker. But, some incident took place. Out of 200 people arrested, 185 people have been released and 15 people have been charge-sheeted. I would only appeal to the Hon. Chief Minister to withdraw the cases filed against these people, because they were already beaten by the police and if cases are going on, they will be put on further harassment. I therefore appeal to the Hon. Chief Minister to kindly withdraw the cases filed, gainst them.

SRI R. GUNDU RAO.—That, I will examine.

MR. CHAIRMAN.—The matter is closed.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಈಗ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದನ್ನೇ ಹೇಳಿದ್ದಾರೆ. ಅವರು ಮಾಡಿದಂಥ ಕೆಲಸಕ್ಕೆ ಸಮರ್ಥನೆ ಮಾಡಿದ್ದಾರೆ. ಇದರ ಬಗ್ಗೆ ನನ್ನ ಅಸಮಾಧಾನವಿದೆ, ಇವರು ಅವರನ್ನು ಈ ರೀತಿಯಾಗಿ ರಕ್ಷಣೆ ಮಾಡುವುದಕ್ಕೆ ಹೋಗಬಾರದು. ನಮ್ಮ ವರದಿ ಪ್ರಕಾರ ಪೋಲೀಸರು ಅತಿರೇಕವಾಗಿ ವರ್ತನೆ ಮಾಡಿದ್ದಾರೆ ಎಂದು ಕೇಳಿದ್ದೇವೆ. ಇದರ ಮೇಲೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈ ರೀತಿ ಅತಿರೇಕ ಯಾರ್ಯಾರು ಮಾಡಿದ್ದಾರೆ ಇವರ ಬಗ್ಗೆ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳಿ, ನನ್ನ ಅಭ್ಯಂತರವಿಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಅವರ ಬಾಯಿಂದಲೇ ಅವರೆಲ್ಲರೂ ತಪ್ಪಿತಸ್ಥರಲ್ಲ, ಅವರಲ್ಲಿ ಇನ್ನೋಸೆಂಟ್ ಪೀಪಲ್ ಇದ್ದಾರೆ, ಕೆಲವರು ಆ ರೀತಿ ಮಾಡಿದರು, ನಿರಪರಾಧಿಗಳು ಸಿಕ್ಕಿಕೊಂಡರು ಎಂದು ಹೇಳಿದ್ದಾರೆ. ಆದ್ದರಿಂದೆ ಅವರು ನಿರಪರಾಧಿಗಳು ಎಂದು ಅವರ ಬಾಯಿಂದ ಬಂದಿರುವುದರಿಂದ ಈ ವಿಷಯವನ್ನು ಅವರಿಗೇ ಬಿಟ್ಟುಬಿಟ್ಟಿದ್ದೇನೆ. ಇನ್ನೊಂದು ವಿಷಯವೇನೆಂದರೆ ನಿನೆಯ ದಿವಸವೇ ನಾವು ಫೈನಾನ್ಸಿಯಲ್ ಬ್ಯುಸಿನೆಸ್ಸನ್ನು ಪ್ರಾರಂಭ ಮಾಡಬೇಕಿತ್ತು, ಪ್ರಾರಂಭ ಮಾಡಲಿಲ್ಲ. ಇವತ್ತು ಇನ್ನೂ ಪ್ರಾರಂಭ ಮಾಡಿಲ್ಲ, ಈಗ ಗವರ್ನಮೆಂಟ್ ಸೇಳಿಯುವ ಸೂಚನೆಗಳನ್ನು ಏನು ತೆಗೆದುಕೊಳ್ಳಬೇಕಾಗಿದೆ ಅವೆಲ್ಲವನ್ನೂ ಬಿಟ್ಟು ನಾವು ಫೈನಾನ್ಸಿಯಲ್ ಬ್ಯುಸಿನೆಸ್ಸನ್ನು ಪ್ರಾರಂಭ ಮಾಡೋಣ ಎಂದು ನಾನು ಹೇಳುತ್ತೇನೆ. ಮಾನ್ಯ ಸದಸ್ಯರೆಲ್ಲರೂ ಇದಕ್ಕೆ ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇನೆ.

Screening of picture entitled "Grahana"

ಶ್ರೀ ಮೈಕೇಲ್ ಫರ್ನಾಂಡಿಸ್.—ಸ್ವಾಮಿ, ಕನ್ನಡ ಭಾಷೆಯಲ್ಲಿ ಹೊಸ ಅಲೆಯ ಚಿತ್ರ 'ಗ್ರಹಣ' ಇನ್ನೂ ಕರ್ನಾಟಕ ರಾಜ್ಯದಲ್ಲಿ ಪ್ರದರ್ಶನಕ್ಕೆ ಬಿಡುಗಡೆಯಾಗಲಿಲ್ಲ ಎಂದು ಹೇಳಿ ಅದನ್ನು ತಯಾರು ಮಾಡಿದಂಥ ಬಡ ಯುವಕ, ಕಾರ್ಮಿಕ ವರ್ಗದವರು ಮುಷ್ಕರ ಹೂಡಿದ್ದಾರೆ. ಅವರು ನಷ್ಟದಲ್ಲಿ ಚಿತ್ರ ತಯಾರು ಮಾಡಿದ್ದಾರೆ. ಅದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿದೆ ಮತ್ತು ರಷ್ಯಾ, ಅಮೇರಿಕಾ, ಫ್ರಾನ್ಸ್‌ನಲ್ಲಿ ಹಾಗೂ ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ